ಬೆಂಗಳೂರು ಗುರುವಾರ 1 ಅಕ್ಟೋಬರ್ 2026 I ಸಂಪುಟ 44 I ಸಂಚಿಕೆ 290 ಪುಟ 8 I ಬೆಲೆ 3.00

Sanjevani Kannada Daily I Bangalore I Thursday I 1 October 2026 I Vol: 44 Issue 290 I Pages 8 I RNINo:36667/82 I Rs. 3.00

# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882




## ಭಾರತೀಯ ಪೈಲಟ್ ಸ್ಮಿತ್ ಮಚ್ಚರ್ ಸಾಹಸಕ್ಕೆ ವಿಶ್ವನಾಯಕರ ಪ್ರಶಂಸೆ

**ನವದೆಹಲಿ /ಟೆಲ್ ಅವೀವ್, ಅ.-** ಆಕಾಶದಲ್ಲೇ ಪೈಲಟ್‌ಗಳ ನಡುವೆ ನಡೆದ ಭೀಕರ ಸಂಘರ್ಷದ ವೇಳೆ ಅಪಾರ ಧೈರ್ಯ, ಸಮಯಪ್ರಜ್ಞೆ ಪ್ರದರ್ಶಿಸಿ 174 ಪ್ರಯಾಣಿಕರ ಜೀವ ಉಳಿಸಲು ನೆರವಾದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದುಬೈಯಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ಈಚ1073 ವಿಮಾನದಲ್ಲಿ ಬುಧವಾರ ಈ ಆತಂಕಕಾರಿ ಘಟನೆ ನಡೆದಿದೆ. ವಿಮಾನದಲ್ಲಿ 174 ಮಂದಿ ಇದ್ದರು. ವರದಿಗಳ ಪ್ರಕಾರ, ವಿಮಾನ ಸುಮಾರು 34 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದಾಗ ಸಹ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಮೇಲೆ ಚಾಕುವಿನಿಂದ ದಾಳಿ ನಡೆಸಿದ್ದಾನೆ. ದಾಳಿಯ ಬಳಿಕ ವಿಮಾನ ನಿಯಂತ್ರಣ ಕಳೆದುಕೊಂಡು ಅತಿ ವೇಗದಲ್ಲಿ ಕೆಳಕ್ಕೆ ಇಳಿಯತೊಡಗಿತ್ತು.




ವಿಮಾನ ಕೆಲವೇ ನಿಮಿಷಗಳಲ್ಲಿ ಸುಮಾರು 17 ಸಾವಿರ ಅಡಿ ಕೆಳಕ್ಕೆ ಕುಸಿದಿತ್ತು. ಪರಿಸ್ಥಿತಿ ನಿಯಂತ್ರಣ ತಪ್ಪುತ್ತಿರುವುದನ್ನು ಅರಿತ ಪ್ರಯಾಣಿಕರಲ್ಲಿ ಕೆಲವರು ಕಾಕ್‌ಪಿಟ್‌ನತ್ತ ಧಾವಿಸಿದರು. ಗಂಭೀರವಾಗಿ ಗಾಯಗೊಂಡಿದ್ದರೂ ಸ್ಮಿತ್ ಮಚ್ಚರ್ ಕಾಕ್‌ಪಿಟ್ ಬಾಗಿಲು ತೆರೆಯಲು ಸಾಧ್ಯವಾಗುವಂತೆ ಕ್ರಮ ಕೈಗೊಂಡರು. ಇದರಿಂದ ಪ್ರಯಾಣಿಕರು ಒಳನುಗ್ಗಿ ದಾಳಿ ನಡೆಸುತ್ತಿದ್ದ ಸಹ ಪೈಲಟ್‌ನನ್ನು ನಿಯಂತ್ರಿಸಲು ಸಾಧ್ಯವಾಯಿತು ಎಂದು ವರದಿಗಳು ತಿಳಿಸಿವೆ.

ನಂತರ ವಿಮಾನವನ್ನು ಸೌದಿ ಅರೇಬಿಯಾದ ತಬೂಕ್ ವಿಮಾನ ನಿಲ್ದಾಣದತ್ತ ತಿರುಗಿಸಲಾಯಿತು. ಅಲ್ಲಿ ತುರ್ತು ಲ್ಯಾಂಡಿಂಗ್ ಮಾಡಲಾಯಿತು. ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲ್ಪಟ್ಟರು. ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ವರದಿಯಾಗಿದೆ.

**ಮೋದಿ: ಸ್ಮಿತ್ ಮಚ್ಚರ್ ಹೀರೋ**

ಭಾರತೀಯ ಪೈಲಟ್‌ನ ಧೈರ್ಯವನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಅತ್ಯಂತ ಗಂಭೀರ ಅಪಾಯದ ನಡುವೆಯೂ ಗಾಯಗೊಂಡ ಸ್ಥಿತಿಯಲ್ಲಿ ಇತರರ ಜೀವ ರಕ್ಷಿಸಲು ಸ್ಮಿತ್ ಮಚ್ಚರ್ ತೋರಿದ ಧೈರ್ಯ ಮತ್ತು ದೃಢಸಂಕಲ್ಪ ಅಪಾರ ಎಂದು ಹೇಳಿದ್ದಾರೆ.

ಅವರ ಸಾಹಸದಿಂದ ನೂರಾರು ಜೀವಗಳು ಉಳಿದಿದ್ದು, ಪುಟ 2

## ಏನಾದರೂ ಸಂಭವಿಸಿದರೆ, ಎಂದಿದ್ದ ಪೈಲಟ್ ಸ್ಮಿತ್ ಮಾತು ವೈರಲ್



**ನವದೆಹಲಿ, ಅ.1-** ದುಬೈ–ಟೆಲ್ ಅವೀವ್ ಮಾರ್ಗದ ಫ್ಲೈದುಬೈ ವಿಮಾನದಲ್ಲಿ ಸಹ ಪೈಲಟ್‌ನೊಂದಿಗೆ ನಡೆದ ಭೀಕರ ಸಂಘರ್ಷದ ಬಳಿಕ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಹೆಸರು ಜಾಗತಿಕವಾಗಿ ಸುದ್ದಿಯಾಗಿದೆ. ಈ ಘಟನೆಗೂ ಸುಮಾರು ಒಂದು ವರ್ಷ ಮುನ್ನ ಅವರು ನೀಡಿದ್ದ ಪಾಡ್‌ಕಾಸ್ಟ್ ಸಂದರ್ಶನವೊಂದು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

2025ರ ಅಕ್ಟೋಬರ್‌ನಲ್ಲಿ ಪ್ರಸಾರವಾದ 'ಬೊನಾಫೈಡ್ ಬಾಂಟರ್ ವಿತ್ ಝುಲಕ್ ಮೆಹ್ತಾ' ಪಾಡ್‌ಕಾಸ್ಟ್‌ನಲ್ಲಿ ಮಚ್ಚರ್, ವಿಮಾನ ಹಾರಾಟದ ವೇಳೆ ತುರ್ತು ಪರಿಸ್ಥಿತಿ ಎದುರಾದಾಗ ತರಬೇತಿ ಪಡೆದ ಸಿಬ್ಬಂದಿಯ ಮಹತ್ವದ ಬಗ್ಗೆ ಮಾತನಾಡಿದ್ದರು. 'ಆಕಾಶದಲ್ಲಿ ಏನಾದರೂ ಸಂಭವಿಸಿದರೆ ನಿಮ್ಮನ್ನು ಯಾರು ರಕ್ಷಿಸುತ್ತಾರೆ' ನಾವು ಆಕಾಶದಲ್ಲಿರುವಾಗ ಏನಾದರೂ ಸಂಭವಿಸಿದರೆ ನಿಮ್ಮನ್ನು ಯಾರು ರಕ್ಷಿಸುತ್ತಾರೆ?" ಎಂದು ಅವರು ಪ್ರಶ್ನಿಸಿದ್ದರು. ಪುಟ 2

# ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ

## ಎಸ್‌ಐಆರ್ ಅಕ್ರಮ ಚುನಾವಣಾ ಆಯೋಗಕ್ಕೆ ಸಿಎಂ ದೂರು ತನಿಖೆಗೆ ಒತ್ತಾಯ




**ಬೆಂಗಳೂರು, ಅ. 1-** ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಆಗಿರುವ ಅಕ್ರಮದ ಬಗ್ಗೆ ರಾಜ್ಯ ಚುನಾವಣಾ ಆಯೋಗ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆಗೆ ಆದೇಶಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಕೃಷ್ಣಾದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಅಕ್ರಮಗಳು ನಡೆದಿವೆ. ಫಾರಂ ನಂ. 7 ಅನ್ನು ಬೇರೆಡೆಯಿಂದ ಮುದ್ರಿಸಿ ತಂದು ಇಲ್ಲಿ ಬಿಎಲ್‌ಓಗಳಿಗೆ ಸಲ್ಲಿಸಿ ಅರ್ಹ ಮತದಾರರನ್ನು ಮತಪಟ್ಟಿಯಿಂದ ಹೊರಗಿಡುವ ಷಡ್ಯಂತ್ರ ನಡೆದಿದೆ. ಈ ಬಗ್ಗೆ ಕ್ರಿಮಿನಲ್ ಪ್ರಕರಣವನ್ನು ಚುನಾವಣಾ ಆಯೋಗ ದಾಖಲಿಸಬೇಕು ಎಂದು ಆಗ್ರಹಿಸಿದರು.

ಫಾರಂ ನಂ. 7 ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರಿಗೆ ನೂರಾರು ಸಂಖ್ಯೆಯಲ್ಲಿ ನೀಡಲಾಗಿದೆ. ಕೊನೆಯ 3 ದಿನ ಇರುವಾಗ ಫಾರಂ ನಂ 7 ಸಲ್ಲಿಕೆಯಾಗಿದೆ. ಇವರಿಗೆ ಇದು ಹೇಗೆ ಸಿಕ್ಕಿತು. ಅಂಕಿ ಅಂಶಗಳನ್ನು ಕೊಟ್ಟವರು ಯಾರು, ಎಲ್ಲದರ ಬಗ್ಗೆಯೂ ತನಿಖೆಯಾಗಬೇಕು. ಚುನಾವಣಾ ಆಯೋಗ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.



ರಾಜ್ಯದ ಮುಖ್ಯಮಂತ್ರಿಯಾಗಿ ಅರ್ಹ ಮತದಾರರನ್ನು ರಕ್ಷಿಸುವುದು ನನ್ನ ಕರ್ತವ್ಯ. ರಾಜ್ಯ ಸರ್ಕಾರವೂ ಎಸ್‌ಐಆರ್‌ನಲ್ಲಿ ನಡೆದಿರುವ ಅಕ್ರಮದ ಬಗ್ಗೆ ಪೊಲೀಸರಿಂದ ತನಿಖೆ ಮಾಡಿಸುತ್ತದೆ. ಜತೆಗೆ ಚುನಾವಣಾ ಆಯೋಗವೂ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿ ತನಿಖೆಗೆ ಆದೇಶಿಸಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯ ನಂತರ ರಾಜ್ಯ ಚುನಾವಣಾ ಮುಖ್ಯ ಆಯುಕ್ತರನ್ನು ಭೇಟಿ ಮಾಡಿ ನಾನು ದೂರು ನೀಡುತ್ತಿದ್ದೇನೆ. ಅವರು ನನ್ನ ದೂರನ್ನು ಸ್ವೀಕರಿಸಿ ಎಸ್‌ಐಆರ್ ಅಕ್ರಮದಲ್ಲಿ ನಡೆದಿರುವ ಕ್ರಿಮಿನಲ್ ಷಡ್ಯಂತ್ರದ ಬಗ್ಗೆ ತನಿಖೆಗೆ ಆದೇಶಿಸುವವರೆಗೂ ಅಲ್ಲಿಂದ ಕದಲುವುದಿಲ್ಲ ಎಂದು ಅವರು ಹೇಳಿದರು.

ಇಂದು ಮಧ್ಯಾಹ್ನ ಸಚಿವ ಸಂಪುಟ ಸಭೆ ಇದೆ. ಅದು ನನಗೆ ಮುಖ್ಯವಲ್ಲ. ರಾಜ್ಯದ ಅರ್ಹ ಮತದಾರರನ್ನು ರಕ್ಷಿಸುವುದು ನನ್ನ ಕರ್ತವ್ಯ. ಹಾಗಾಗಿ ನಾನು ಸಚಿವ ಸಂಪುಟ ಸಭೆ ಇದ್ದರೂ ರಾಜ್ಯದ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಅಕ್ರಮ ನಡೆಸಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವವರೆಗೂ ಅಲ್ಲಿಂದ ಬರಲ್ಲ. ನನ್ನ ಜತೆ ಸಚಿವ ಸಂಪುಟದ ಸಹದ್ಯೋಗಿಗಳು ಇರುತ್ತಾರೆ ಎಂದು ಹೇಳಿದರು.

ಅರ್ಹ ಮತದಾರರನ್ನು ಮತಪಟ್ಟಿಯಿಂದ ಹೊರಗಿಡುವುದಕ್ಕೆ ಅವಕಾಶ ಕೊಡಲ್ಲ. ನಾನು ಕಾನೂನು ಸಲಹೆಯನ್ನು ಪಡೆದುಕೊಳ್ಳುತ್ತೇನೆ. ರಾಜ್ಯ ಸರ್ಕಾರದಿಂದಲೂ ತನಿಖೆ ನಡೆಸುತ್ತೇವೆ. ರಾಜ್ಯದಲ್ಲಿ ಎಸ್‌ಐಆರ್ ಪರಿಷ್ಕರಣೆಯಲ್ಲಿ ದೊಡ್ಡ ಮಟ್ಟದ ಪಿತೂರಿ ನಡೆದಿದೆ ಎಂದು ದೂರಿದರು.

ರಾಜ್ಯದಿಂದಲೇ ಮತಗಳ್ಳತನದ ವಿರುದ್ಧ ಹೋರಾಟ ಆರಂಭವಾಯಿತು. ಈಗ ಅದು ದೇಶವ್ಯಾಪಿ ಆಂದೋಲನವಾಗಿ ನಡೆಯುತ್ತಿದೆ. ಎಸ್‌ಐಆರ್ ಪ್ರಾರಂಭವಾದ ಮೇಲೆ ಸರ್ಕಾರದಿಂದ ಚುನಾವಣಾ ಆಯೋಗಕ್ಕೆ ಸಹಕಾರ, ಪ್ರೋತ್ಸಾಹ ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಪಕ್ಷದವರು, ಬಿಜೆಪಿ–ಜೆಡಿಎಸ್‌ನವರು ಬಿಎಲ್‌ಎ–2 ನೇಮಕ ಮಾಡಿದ್ದಾರೆ. ಒಂದು ಕೋಟಿ ಮತ ತೆಗೆದಿದ್ದಾರೆ. ಅರ್ಹ ಮತದಾರರ ಫಾರಂ 7 ನೀಡಿ ಮತಪಟ್ಟಿಯಿಂದ ಹೆಸರು ತೆಗೆಸಿಕೊಳ್ಳುವ ಕೆಲಸ ನಡೆದಿದೆ. ಬಾಲ್ಕಿ, ನರಸಿಂಹರಾಜ ಸೇರಿ ಹಲವು ಕ್ಷೇತ್ರಗಳಲ್ಲಿ ಈ ರೀತಿ ಅಕ್ರಮಗಳು ನಡೆದಿವೆ. ಬಿಜೆಪಿ ಕಾರ್ಯಕರ್ತರೇ ಫಾರಂ 7ಗಳನ್ನು ನೀಡಿದ್ದಾರೆ. ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರ ಪುಟ 2

## ರನ್ಯಾರಾವ್‌ಗೆ 89 ಕೋಟಿ ದಂಡ



ಬೆಂಗಳೂರು, ಅ.1–ಸ್ಯಾಂಡಲ್‌ವುಡ್ ನಟಿ ನಿವೃತ್ತ ಡಿಜಿಪಿ ರಾಮಚಂದ್ರರಾವ್ ಮಲಮಗಳು ರನ್ಯಾ ರಾವ್ ವಿರುದ್ಧದ ಚಿನ್ನ ಅಕ್ರಮ ಸಾಗಣೆ ಪ್ರಕರಣದಲ್ಲಿ ಕಸ್ಟಮ್ಸ್ ಇಲಾಖೆ ಭಾರಿ ದಂಡ ವಿಧಿಸಿದೆ.

ದುಬೈನಿಂದ ಅಕ್ರಮವಾಗಿ ಚಿನ್ನ ಸಾಗಣೆ ಮಾಡಿದ ಆರೋಪದ ಪ್ರಕರಣದಲ್ಲಿ ರನ್ಯಾ ರಾವ್ ಅವರಿಗೆ ಬರೋಬ್ಬರಿ 89 ಕೋಟಿ ದಂಡ ವಿಧಿಸಿ ಕಸ್ಟಮ್ಸ್ ಇಲಾಖೆ ಆದೇಶ ಹೊರಡಿಸಿದೆ.

ಕಸ್ಟಮ್ಸ್ ಇಲಾಖೆಯ ಜಂಟಿ ನಿರ್ದೇಶಕ ಸಂದೀಪ್ ಅವರು ಈ ಕುರಿತು 399 ಪುಟಗಳ ವಿಸ್ತೃತ ಆದೇಶ ಹೊರಡಿಸಿದ್ದು, ದಂಡದ ಮೊತ್ತವನ್ನು ಪಾವತಿಸುವಂತೆ ರನ್ಯಾ ರಾವ್ ಅವರಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದ್ದಾರೆ.

**113 ಕೆಜಿ ಚಿನ್ನ ಸಾಗಣೆ:**

ಕಸ್ಟಮ್ಸ್ ತನಿಖೆಯ ಪ್ರಕಾರ, 2024ರ ಮಾರ್ಚ್ 7ರಿಂದ 2025ರ ಫೆಬ್ರವರಿ 18ರವರೆಗೆ ರನ್ಯಾ ರಾವ್ ಅವರು ಸಹ ಆರೋಪಿಗಳೊಂದಿಗೆ ಸೇರಿ ದುಬೈನಿಂದ ಪುಟ 2

## ಅಂತರ್ಜಲ ಮಟ್ಟ ವಿವರ ಸಂಗ್ರಹಕ್ಕೆ ಸೂಚನೆ

**ಬೆಂಗಳೂರು, ಅ.1-** ಮಳೆಯ ಕೊರತೆಯಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ 5927 ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟದ ವಿವರವನ್ನು ಸಮರೋಪಾದಿಯಲ್ಲಿ ಸಂಗ್ರಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.



ವಿಕಾಸಸೌಧದಲ್ಲಿಂದು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಪುಟ 2

## ಚಿನ್ನಕ್ಕಾಗಿ ಭಾರತ– ಪಾಕ್ ಕಾದಾಟ

**ನಿಶಿನ್, ಅ.1-** ಜಪಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಕ್ರಿಕೆಟ್ ವಿಭಾಗದಲ್ಲಿ ಚಿನ್ನದ ಪದಕಕ್ಕಾಗಿ ಭಾರತ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಸೆಣಸಲಿದೆ. ಇಂದು ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತ, ಶ್ರೀಲಂಕಾವನ್ನು ಮಣಿಸಿ ಭಾರತ ಫೈನಲ್‌ಗೆ ಲಗ್ಗೆ ಹಾಕಿತು. ಪಾಕಿಸ್ತಾನ, ಬಾಂಗ್ಲಾವನ್ನು ಸೋಲಿಸಿ ಫೈನಲ್ ಪ್ರವೇಶಿಸಿತು.

**ನಾಡಿದ್ದು ಫೈನಲ್**

ಭಾರತ–ಪಾಕಿಸ್ತಾನ ತಂಡಗಳ ನಡುವಣ ಚಿನ್ನದ ಪದಕಕ್ಕಾಗಿ ಫೈನಲ್ ಪಂದ್ಯ ನಾಡಿದ್ದು ನಡೆಯಲಿದೆ. ಭಾರತೀಯ ಕಾಲಮಾನ ಶನಿವಾರ ಬೆಳಿಗ್ಗೆ 10 ಗಂಟೆಗೆ ಈ ಹೈವೋಲ್ಟೇಜ್ ಪಂದ್ಯ ನಡೆಯಲಿದೆ.

ಏಷ್ಯಖಂಡದ ಸಾಂಪ್ರದಾಯಕ ಎದುರಾಳಿ ಪಾಕಿಸ್ತಾನ ವಿರುದ್ಧ ನಡೆಯಲಿರುವ ಫೈನಲ್ ಪಂದ್ಯ ಕಣ್ತುಂಬಿಕೊಳ್ಳಲು ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ.

**ಏಷ್ಯನ್ಸ್ ಕ್ರೀಡಾಕೂಟ**

ಮೊದಲ ಬ್ಯಾಟ್ ಮಾಡಿದ ಭಾರತ 7 ವಿಕೆಟ್ ನಷ್ಟಕ್ಕೆ 20 ಓವರ್‌ಗಳಲ್ಲಿ 170 ರನ್ ಗಳಿಸಿತು. ನಿಶಾನ್, ಕಿಶನ್ 46 ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿಗಳ ನೆರವಿನಿಂದ ಅಜೇಯ 80 ರನ್ ಗಳಿಸುವ ಮೂಲಕ ಲಂಕಾ ಬೌಲಿಂಗ್ ದಾಳಿಯನ್ನು ಧೂಳಿಪಟ ಮಾಡಿದರು.




ಮತ್ತೊಂದೆಡೆ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ 21 ಎಸೆತಗಳಲ್ಲಿ 6 ಬೌಂಡರಿ ಹಾಗೂ 2 ಸಿಕ್ಸರ್ ನೆರವಿನಿಂದ 38 ರನ್ ಗಳಿಸಿದರು. ಸಂಜು ಸ್ಯಾಮ್‌ಸನ್, ಅಭಿಷೇಕ್ ಶರ್ಮ, ನಾಯಕ ಶ್ರೇಯಸ್ ಅಯ್ಯರ್ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಲು ವಿಫಲರಾದರು.

120 ರನ್ ಗಳ ಬೆನ್ನಹತ್ತಿದ ಶ್ರೀಲಂಕಾ ಭಾರತದ ಬೌಲಿಂಗ್ ದಾಳಿಗೆ ತತ್ತರಿಸಿತು. ಕೇವಲ 9.5 ಓವರ್‌ಗಳಲ್ಲಿ ಪುಟ 2

## ವಿಜಯ ಸಂಕಲ್ಪ ಯಾತ್ರೆಗೆ ಬಿವೈವಿ ಚಾಲನೆ

**ಬೆಂಗಳೂರು, ಅ. 1-** ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ನಿನ್ನೆ ಭಾರತ್ ಜೋಡೋ–2 ಯಾತ್ರೆ ಆರಂಭಿಸಿದ ಬೆನ್ನಲ್ಲೆ ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆ ಇಂದು ಆರಂಭಗೊಂಡಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಶ್ರೀ ವಿಘ್ನೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬೂತ್ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿದರು.

ದೇಶಾದ್ಯಂತ ಬಿಜೆಪಿ ನಡೆಸಿರುವ ಸೇವಾ ಸಂಕಲ್ಪ ಅಭಿಯಾನದ ಭಾಗವಾಗಿ ಬೂತ್ ವಿಜಯ ಸಂಕಲ್ಪ ಯಾತ್ರೆಯನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ

ರಾಜ್ಯದಲ್ಲಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪದೊಂದಿಗೆ ಈ ಯಾತ್ರೆಗೆ ಚಾಲನೆ ನೀಡಲಾಗಿದೆ

ಕುರುಡಮಲೈ ವಿಘ್ನೇಶ್ವರ ದೇವಸ್ಥಾನದಿಂದ ಆರಂಭವಾದ ಯಾತ್ರೆ ಬಂಗಾರಪೇಟೆ ಹಾಗೂ ಕೆಜಿಎಫ್ ವಿಧಾನಸಭಾ ಕ್ಷೇತ್ರಗಳಲ್ಲಿ ಸಾಗಿತು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಂಗೌಡ, ನಂದೀಶ್‌ರೆಡ್ಡಿ, ರಾಜ್ಯ ಕಾರ್ಯದರ್ಶಿಗಳಾದ ರಮೇಶ್‌ಗೌಡ, ಅಂಬಿಕಾ ಹುಲಿನಾಯ್ಕರ್, ಕೋಲಾರ ಜಿಲ್ಲಾಧ್ಯಕ್ಷರಾದ ಓಂಶಕ್ತಿ ಚಲಪತಿ, ಮಾಜಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಶಾಸಕರಾಜ ವೈ. ಸಂಪಂಗಿ, ಬಿ.ಪಿ. ವೆಂಕಟಮುನಿಯಪ್ಪ, ಕೆ.ಎಸ್. ಮಂಜುನಾಥ್‌ಗೌಡ, ವರ್ತೂರು ಪ್ರಕಾಶ್, ವೈ.ಎ. ನಾರಾಯಣಸ್ವಾಮಿ ಸೇರಿದಂತೆ ಪಕ್ಷದ ಹಲವು ಮುಖಂಡರು, ಕಾರ್ಯಕರ್ತರು ಈ ಯಾತ್ರೆಯಲ್ಲಿ ಭಾಗಿಯಾದರು

**ಕೈ ವಿರುದ್ಧ ವಾಗ್ದಾಳಿ**

ಹತಾಶರಾದ ಕಾಂಗ್ರೆಸ್ ಪಕ್ಷ ಮತ್ತು ಆ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗದ ಮೇಲೂ ಅನುಮಾನ ಹುಟ್ಟು ಹಾಕುವ ದುಸ್ಸಾಹಸಕ್ಕೆ ಕೈಹಾಕುತ್ತಿದ್ದಾರೆ ಎಂದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಬೂತ್ ವಿಜಯ ಸಂಕಲ್ಪ ಯಾತ್ರೆಯ ಪ್ರಯುಕ್ತ ಮುಳಬಾಗಿಲು ಪುಟ 2

## ವಾಣಿಜ್ಯ ಎಲ್‌ಪಿಜಿ 60 ರೂ. ಏರಿಕೆ

**ನವದೆಹಲಿ, ಅ.1-** ಹಬ್ಬದ ಋತುವಿನ ಮುನ್ನವೇ ಗ್ರಾಹಕರಿಗೆ ಬೆಲೆ ಏರಿಕೆಯ ಹೊಡೆತ ಎದುರಾಗಿದೆ. ಅಕ್ಟೋಬರ್ 1ರಿಂದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಏರಿಕೆ ಮಾಡಲಾಗಿದೆ. ಹಲವು ನಗರಗಳಲ್ಲಿ 19 ಕೆ.ಜಿ. ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂಪಾಯಿಗೂ ಹೆಚ್ಚು ಏರಿಕೆಯಾಗಿದೆ.

ಇದರಿಂದ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ರಸ್ತೆಬದಿ ಆಹಾರ ಮಳಿಗೆಗಳು ಸೇರಿದಂತೆ ವಾಣಿಜ್ಯ ಅನಿಲವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುವ ವ್ಯವಹಾರಗಳ ನಿರ್ವಹಣಾ ವೆಚ್ಚ ಹೆಚ್ಚಾಗುವ ಸಾಧ್ಯತೆ ಇದೆ. ಆದರೆ, 14.2 ಕೆ.ಜಿ. ತೂಕದ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಹೀಗಾಗಿ ಸದ್ಯಕ್ಕೆ ಗೃಹ ಬಳಕೆದಾರರಿಗೆ ಕೊಂಚ ನಿರಾಳತೆ ದೊರೆತಿದೆ.



ಬೆಂಗಳೂರಿನಲ್ಲಿ 19 ಕೆ.ಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ ಸುಮಾರು 62 ರೂಪಾಯಿಂದ 62.50 ರೂಪಾಯಿಯಷ್ಟು ಏರಿಕೆಯಾಗಿದ್ದು, ಪರಿಷ್ಕೃತ ದರವು ಅಂದಾಜು ರೂ. 2,893.50 ತಲುಪಿದೆ.

ದೆಹಲಿಯಲ್ಲಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆ ಸೆಪ್ಟೆಂಬರ್‌ನಲ್ಲಿ 2,747.50 ರೂ. ಇತ್ತು. ಅಕ್ಟೋಬರ್ 1ರಿಂದ ಪುಟ 2

## ವಿಧಾನಸೌಧದ ಮೆಟ್ಟಿಲುಗಳ ಮೇಲೆ ಉರ್ದು ಹಬ್ಬ: ಕರವೇ ವಿರೋಧ

**ಬೆಂಗಳೂರು, ಅ. 1-** ವಿಧಾನಸೌಧದ ಮೆಟ್ಟಿಲುಗಳ ಮೇಲೆ ರಾಜ್ಯ ಸರ್ಕಾರ ಉರ್ದು ಹಬ್ಬ ಆಯೋಜಿಸಲು ನಿರ್ಧರಿಸಿದೆ ಎಂಬ ವರದಿಗಳಿಗೆ ಕರ್ನಾಟಕ ರಕ್ಷಣಾ ವೇದಿಕೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಕರವೇ, ವಿಧಾನಸೌಧದಂತಹ ನಾಡಿನ ಶಕ್ತಿಸೌಧದಲ್ಲಿ ಉರ್ದು ಹಬ್ಬ ಆಯೋಜಿಸುವ ನಿರ್ಧಾರ ಅವಿವೇಕದ ಮತ್ತು ಅಪ್ರಬುದ್ಧ ನಡೆ ಎಂದು ಟೀಕಿಸಿದೆ. ಸರ್ಕಾರವೇ ಮುಂದೆ ನಿಂತು ಸಮಾಜದ ಸ್ವಾಸ್ಥ್ಯ ಹಾಗೂ ಸೌಹಾರ್ದಕ್ಕೆ ಧಕ್ಕೆ ತರುವಂತಹ ವಿವಾದಕ್ಕೆ ಕಾರಣವಾಗಬಾರದು ಎಂದು ಆಗ್ರಹಿಸಿದೆ.

ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ, ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ಕೆಲಸಗಳಿವೆ. ಇಂತಹ ಸಂದರ್ಭದಲ್ಲಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಉರ್ದು ಹಬ್ಬ ಆಯೋಜಿಸುವ ನಿರ್ಧಾರ ಏಕೆ ಕೈಗೊಳ್ಳಲಾಗಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಕರವೇ ಪ್ರಶ್ನಿಸಿದೆ. ಪುಟ 2

## ಗುತ್ತಿಗೆದಾರರಿಂದ ಕಮೀಷನ್ ಆರೋಪ: ಪುರಾವೆ ಕೇಳಿದ ಪ್ರಿಯಾಂಕ್

**ಬೆಂಗಳೂರು, ಅ.1-** ಶಾಸಕರ ವಿರುದ್ಧ ಶೇ.75ರಷ್ಟು ಕಮಿಷನ್ ಆರೋಪ ಮಾಡುತ್ತಿರುವ ಗುತ್ತಿಗೆದಾರರ ಸಂಘವು ಯಾರ ವಿರುದ್ಧ ಆರೋಪವಿದೆಯೋ ಅವರ ಹೆಸರು ಹಾಗೂ ಸಂಬಂಧಿತ ದಾಖಲೆಗಳನ್ನು ನೀಡಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗುತ್ತಿಗೆದಾರರ ಸಂಘದವರು ಪದೇಪದೇ 'ಇಷ್ಟು ಕೊಟ್ಟಿಲ್ಲ, ಅಷ್ಟು ಕೊಟ್ಟಿಲ್ಲ' ಎಂದು ಹೇಳುವುದು ಸರಿಯಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಗುತ್ತಿಗೆಗಳು ಯಾವ ರೀತಿಯಲ್ಲಿ ನೀಡಲಾಗುತ್ತಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಿಂದಿನ ಸರ್ಕಾರದಲ್ಲಿ ನೀಡಲಾಗಿದ್ದ ಕಾಮಗಾರಿಗಳ ಬಿಲ್‌ಗಳನ್ನೂ ಕಷ್ಟದ ನಡುವೆಯೇ ಪ್ರಾಮಾಣಿಕವಾಗಿ ಪಾವತಿಸಲಾಗುತ್ತಿದೆ. ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವನಾಗಿ ಬಂದಾಗ ಇಲಾಖೆಯಲ್ಲಿ ಎಷ್ಟು ಬಿಲ್‌ಗಳು ಬಾಕಿ ಇದ್ದವು, ಈಗ ಎಷ್ಟು ಬಾಕಿ ಇವೆ ಎಂಬುದನ್ನು ಪರಿಶೀಲಿಸಬಹುದು ಎಂದರು.

ಗುತ್ತಿಗೆದಾರರ ಸಂಘವೇ ತಮಗೆ ಪತ್ರ ನೀಡಿ ಬಿಲ್‌ಗಳು ನ್ಯಾಯಯುತವಾಗಿ ಪಾವತಿಯಾಗುತ್ತಿವೆ ಹಾಗೂ ಕಾಮಗಾರಿ ಮತ್ತು ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿದೆ ಎಂದು ಲಿಖಿತವಾಗಿ ತಿಳಿಸಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿನ ತಪ್ಪುಗಳನ್ನು ಸರಿಪಡಿಸಿಕೊಂಡು ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ನಿಲ್ಲಬಾರದು, ಗುತ್ತಿಗೆದಾರರ ಪುಟ 2

ಚಿನಿವಾರಪೇಟೆ - ಮುಂಬೈ, ಅಕ್ಟೋಬರ್ 1: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ I 1,54,420 I 22 ಕ್ಯಾರೆಟ್ - 10 ಗ್ರಾಂ 1,41,550 I ಬೆಳ್ಳಿ: 1 ಕೆ.ಜಿ. - 3,20,000

ಸಂಜೆ ವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)



ಕೋಲಾರದಲ್ಲಿ ಇಂದು ನಡೆದ ಬಿಜೆಪಿಯ ಬೂತ್ ವಿಜಯ ಸಂಕಲ್ಪ ಯಾತ್ರೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರರವರು ಗಿಡ ನೆಡುವ ಮೂಲಕ ಚಾಲನೆ ನೀಡಿದರು. ಮಾಜಿ ಶಾಸಕರಾದ ನಂದೀಶ್ ರೆಡ್ಡಿ, ಪ್ರೀತಂಗೌಡ ಮತ್ತಿತರ ಮುಖಂಡರು ಇದ್ದಾರೆ.

# ವಿಜಯ ಸಂಕಲ್ಪ ಯಾತ್ರೆಗೆ ಬಿವೈವಿ ಚಾಲನೆ

ಮುಳಬಾಗಿಲು ತಾಲೂಕಿನ ಕುರುಡುಮಲೆ ಶ್ರೀ ವಿಘ್ನೇಶ್ವರ ದೇವಸ್ಥಾನದಲ್ಲಿ ಇಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಪ್ರಮುಖರು ಪೂಜೆಯಲ್ಲಿ ಭಾಗವಹಿಸಿದ್ದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು ಕಾಂಗ್ರೆಸ್ಸಿನವರ ಕಪಟ ನಾಟಕವನ್ನು ಜನರು ಅರ್ಥ ಮಾಡಿಕೊಂಡಿದ್ದಾರೆ ಎಂದರು.

ಹತಾಶರಾದ ಕಾಂಗ್ರೆಸ್ ಪಕ್ಷ ಮತ್ತು ಆ ಪಕ್ಷದ ನಾಯಕ ರಾಹುಲ್ ಗಾಂಧಿಯವರಿಗೆ ನರೇಂದ್ರ ಮೋದಿಯವರ ಯೋಜನೆಗಳು, ದೇಶದ ಮುನ್ನಡೆಸುವಿಕೆಯನ್ನು ಸಹಿಸಲು ಸಾಧ್ಯವಾಗುತ್ತಿಲ್ಲ; ಮೋದಿಜೀಯವರ ಜನಪ್ರಿಯತೆಯನ್ನೂ ಇವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಂಥ ಭೀಕರ ಬರಗಾಲದ ಸಂದರ್ಭದಲ್ಲಿ ಹೆಕ್ಟೇರಿಗೆ 50 ಸಾವಿರ ಪರಿಹಾರಧನ ಕೊಡಿ ಎಂದು ನಾವು ಕೇಳಿದರೆ, ಅದನ್ನೂ ಕೊಡಲು ಸಾಧ್ಯವಾಗಿಲ್ಲ. ಕೇವಲ 2,500 ರೂ. ಭಿಕ್ಷೆ ಕೊಟ್ಟಂತೆ ಕೊಟ್ಟಿದ್ದಾರೆ ಎಂದು ಟೀಕಿಸಿದರು. ರಾಜ್ಯ ಸರಕಾರವು ರೈತರ ಪಾಲಿಗೆ ಬದುಕಿದ್ದೂ ಸತ್ತಂತಿದೆ ಎಂದು ದೂರಿದರು.

**ಬರೆ ಎಳೆಯುವ ಕೆಲಸ..**

ಒನ್‌ವೇನಲ್ಲಿ ವಾಹನ ಹೋದರೆ 5 ಸಾವಿರ ದಂಡ ವಿಧಿಸುವುದಾಗಿ ಸಚಿವರು ಹೇಳಿದ್ದಾರೆ. ಕಾನೂನು ಉಲ್ಲಂಘಿಸುವವರ ಮೇಲೆ ಕ್ರಮ ಕೈಗೊಳ್ಳಲಿ. ವಸೂಲಾತಿ, ಜನರ ಮೇಲೆ ಬರೆ ಎಳೆಯುವ ಕೆಲಸಕ್ಕೆ ಕಾಂಗ್ರೆಸ್ ಸರಕಾರ ಹೊರಟಿದೆ. ಸರಕಾರದ ವಿರುದ್ಧ ಜನರೇ ದಂಗೆ ಏಳುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ರಿಯಲ್ ಎಸ್ಟೇಟ್ ಹೊರತುಪಡಿಸಿ ಬೇರೇನೂ ಆದ್ಯತೆ ಇಲ್ಲ ಎಂದು ಟೀಕಿಸಿದರು. ಕಳೆದ 3 ವರ್ಷದಲ್ಲಿ 55 ಸಾವಿರ ಕೋಟಿ ಎಸ್‌ಇಪಿ, ಟಿಎಸ್‌ಪಿ ಹಣವನ್ನು ಬೇರೆ ಬೇರೆ ಕಾರ್ಯಕ್ರಮಕ್ಕೆ ವರ್ಗಾವಣೆ ಮಾಡಿ ದಲಿತ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಟೀಕಿಸಿದರು

ಈ ಜನವಿರೋಧಿ ಕಾಂಗ್ರೆಸ್ ಸರಕಾರಕ್ಕೆ ಜನರು ಬುದ್ಧಿ ಕಲಿಸಲಿದ್ದಾರೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಜನರು ಆಶೀರ್ವಾದ ಮಾಡಲಿದ್ದಾರೆ. ಕರ್ನಾಟಕವು ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಹೆಬ್ಬಾಗಿಲು. ಮುಂದಿನ ದಿನಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಇಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದು.

ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವರಿಗೆ ಶೇ 8 ಕಮಿಷನ್ ಕೊಡಬೇಕಾಗುತ್ತದೆ ಎಂಬ ಬಗ್ಗೆ ಕಾಂಗ್ರೆಸ್ ಶಾಸಕ ಅಶೋಕ್ ರೈ ಪತ್ರ ಬರೆದಿದ್ದಾರೆ. ಭ್ರಷ್ಟಾಚಾರ ಇಲ್ಲದೇ ಕಾಂಗ್ರೆಸ್ ಸರಕಾರದಲ್ಲಿ ಒಂದು ಹುಲ್ಲು ಕಡ್ಡಿಯೂ ಅಲ್ಲಾಡುವುದಿಲ್ಲ. ಗೃಹಲಕ್ಷ್ಮಿ 5 ಸಾವಿರ ಕೋಟಿ ಎಲ್ಲಿ ಹೋಗಿದೆ ಎಂಬುದಕ್ಕೆ ಇವತ್ತಿಗೂ ಉತ್ತರ ಸಿಕ್ಕಿಲ್ಲ ಎಂದು ಗಮನ ಸೆಳೆದರು. ಇದು ಭ್ರಷ್ಟರಿಂದ– ಭ್ರಷ್ಟರ ರಕ್ಷಣೆಗೆ ಇರುವ ಸರಕಾರ ಎಂದು ಟೀಕಿಸಿದರು. ಈ ಭ್ರಷ್ಟರ ಸರಕಾರವನ್ನು ಬುಡಸಮೇತ ಕಿತ್ತುಹಾಕುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ನುಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸುದೀರ್ಘ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಮೋದಿಜೀ ಅವರಿಗೆ ಭಗವಂತನು ಆರೋಗ್ಯ ಮತ್ತು ಆಯುಸ್ಸನ್ನು ಕೊಟ್ಟು ದೇಶ ಮುನ್ನಡೆಸುವ ಹೆಚ್ಚಿನ ಶಕ್ತಿ ಕೊಡಲೆಂದು ಪ್ರಾರ್ಥಿಸಿ ಪ್ರವಾಸ ಆರಂಭಿಸಿದ್ದೇವೆ. ಬಂಗಾರಪೇಟೆ ಮತ್ತು ಕೆಜಿಎಫ್ ವಿಧಾನಸಭಾ ಕ್ಷೇತ್ರಗಳಲ್ಲಿ ಸೇವಾ ಸಂಕಲ್ಪ ಅಭಿಯಾನ ಮುಂದುವರಿಯಲಿದೆ ಎಂದರು.

ಮುಂದೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಬರಲಿವೆ. ಅದು ಕಾರ್ಯಕರ್ತರ ಚುನಾವಣೆಯಾಗಿದ್ದು, ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸವೂ ಯಾತ್ರೆ ವೇಳೆ ನಡೆಯಲಿದೆ. ಭವಿಷ್ಯದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅಧಿಕಾರಕ್ಕೆ ಬರಲು ಕೋಲಾರ ಜಿಲ್ಲೆಯಲ್ಲೂ ಅತಿ ಹೆಚ್ಚು ಬಿಜೆಪಿ ಶಾಸಕರನ್ನು ನಾವು ಗೆಲ್ಲಬೇಕಿದೆ ಎಂದು ತಿಳಿಸಿದರು.

# ರನ್ಯಾರಾವ್‌ಗೆ 89 ಕೋಟಿ ದಂಡ

ಸುಮಾರು 113 ಕೆಜಿ ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ಸಾಗಣೆ ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ತರುಣ್ ಸೇರಿದಂತೆ ಇತರ ಆರೋಪಿಗಳೊಂದಿಗೆ ಸೇರಿ ಅಕ್ರಮ ಚಿನ್ನದ ವಹಿವಾಟಿನಲ್ಲಿ ಭಾಗಿಯಾಗಿದ್ದರು ಎಂಬ ಆರೋಪ ರನ್ಯಾ ರಾವ್ ವಿರುದ್ಧ ಕೇಳಿಬಂದಿದೆ. ಪ್ರಕರಣದ ಪ್ರತಿಯೊಬ್ಬ ಆರೋಪಿಯ ಪಾತ್ರ ಹಾಗೂ ಅಕ್ರಮ ವಹಿವಾಟಿನ ಪ್ರಮಾಣವನ್ನು ಆಧರಿಸಿ ಕಸ್ಟಮ್ಸ್ ಇಲಾಖೆ ದಂಡ ವಿಧಿಸಿದೆ.

ಕಸ್ಟಮ್ಸ್ ಕಾಯ್ದೆಯಡಿ ಈ ದಂಡದ ಆದೇಶ ಹೊರಡಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ 399 ಪುಟಗಳ ವಿಸ್ತೃತ ವರದಿಯನ್ನು ಸಿದ್ಧಪಡಿಸಲಾಗಿದೆ.

**ಮಾರ್ಚ್ 2025ರಲ್ಲಿ ಬಂಧನ:**

ದುಬೈನಿಂದ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 2025ರ ಮಾರ್ಚ್ 3ರಂದು ಆಗಮಿಸಿದ್ದ ರನ್ಯಾ ರಾವ್ ಅವರನ್ನು ಡಿಆರ್‌ಐ ಅಧಿಕಾರಿಗಳು ತಡೆದು ತಪಾಸಣೆ ನಡೆಸಿದ್ದರು. ಈ ವೇಳೆ ಅವರ ಬಳಿ 14.213 ಕೆಜಿ ಚಿನ್ನ ಪತ್ತೆಯಾದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿತ್ತು. ಬಂಧನದ ಬಳಿಕ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿತ್ತು. ಈ ನಡುವೆ ಹೈಕೋರ್ಟ್‌ನ ಏಕಸದಸ್ಯ ಪೀಠವು ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು.

**ಮುನ್ನೆಚ್ಚರಿಕೆ ಬಂಧನ:**

ಚಿನ್ನದ ಅಕ್ರಮ ಸಾಗಣೆ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೋ (ಸಿಇಐಬಿ) ರನ್ಯಾ ರಾವ್ ವಿರುದ್ಧ ಕಾಫಿಪೋಸಾ ಕಾಯ್ದೆಯ ಸೆಕ್ಷನ್ 3(1) ಅಡಿ ಮುನ್ನೆಚ್ಚರಿಕೆ ಬಂಧನದ ಆದೇಶ ಹೊರಡಿಸಿತ್ತು.

ತನಿಖೆ ಮುಂದುವರಿದಂತೆ, ರನ್ಯಾ ರಾವ್ ಅವರು ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನದ ಅಕ್ರಮ ಸಾಗಣೆ ಜಾಲದಲ್ಲಿ ಭಾಗಿಯಾಗಿರುವ ಆರೋಪಕ್ಕೆ ಸಂಬಂಧಿಸಿದ ಹಲವು ಮಾಹಿತಿಗಳು ಬೆಳಕಿಗೆ ಬಂದಿದ್ದವು. ನಂತರ 2026ರ ಏಪ್ರಿಲ್ 22ರಂದು ಆರ್ಥಿಕ ಅಪರಾಧಗಳ ತಡೆ ನ್ಯಾಯಾಲಯ ರನ್ಯಾ ರಾವ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಇದೀಗ ಪ್ರಕರಣದಲ್ಲಿ ಕಸ್ಟಮ್ಸ್ ಇಲಾಖೆ 89 ಕೋಟಿ ದಂಡ ವಿಧಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ.

**ಪ್ರಕರಣದ ಹಿನ್ನಲೆ:**

ನಟಿ ರನ್ಯಾ ರಾವ್, ಚಿತ್ರರಂಗದಿಂದ ಬ್ರೇಕ್ ತೆಗೆದುಕೊಂಡ ಬಳಿಕ ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದರು. ಬೆಂಗಳೂರಿನ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲಿ ವಾಸವಿದ್ದ ರನ್ಯಾ ರಾವ್ ಉದ್ಯಮ ಮತ್ತು ಬ್ಯುಸಿನೆಸ್ ನೆಪ ಒಡ್ಡಿ ದುಬೈಗೆ ಸಾಗುತ್ತಿದ್ದ ನಟಿ ರನ್ಯಾ ರಾವ್ ಅವರ ಮೇಲಿದ್ದ ಅನುಮಾನದಿಂದಾಗಿ ಕಸ್ಟಮ್ಸ್ ಹಾಗೂ ಡಿಆರ್‌ಐ ಅಧಿಕಾರಿಗಳು ಅವರ ಚಲನವಲನಗಳ ಮೇಲೆ ನಿರಂತರ ನಿಗಾ ಇರಿಸಿದ್ದರು, 2025ರ ಮಾರ್ಚ್ 3ರಂದು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ರನ್ಯಾ ರಾವ್ ಅವರನ್ನು ಡಿಆರ್‌ಐ ಅಧಿಕಾರಿಗಳು ತಡೆದು ತೀವ್ರ ತಪಾಸಣೆ ನಡೆಸಿದ್ದರು. ಈ ವೇಳೆ ಅವರ ಬಳಿ 14.213 ಕೆಜಿ ಅಕ್ರಮ ಚಿನ್ನ ಪತ್ತೆಯಾಗಿದ್ದು, ತಕ್ಷಣವೇ ಅವರನ್ನು ಬಂಧಿಸಲಾಯಿತು. ಬಂಧನದ ಬಳಿಕ ರನ್ಯಾ ರಾವ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ತಳ್ಳಲಾಯಿತು. ಈ ಮಧ್ಯೆ ಹೈಕೋರ್ಟ್ ಏಕಸದಸ್ಯ ಪೀಠವು ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿತು.

**ಒಂದು ವರ್ಷ ಜೈಲು:**

ಚಿನ್ನದ ಅಕ್ರಮ ಸಾಗಾಣಿಕೆಯ ಗಂಭೀರತೆಯನ್ನು ಪರಿಗಣಿಸಿ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೋ ರನ್ಯಾ ರಾವ್ ವಿರುದ್ಧ ಕಾಫಿಪೋಸಾ ಕಾಯ್ದೆ ಸೆಕ್ಷನ್ 3(1) ಅಡಿ ಮುನ್ನೆಚ್ಚರಿಕೆ ಬಂಧನದ ಆದೇಶ ಹೊರಡಿಸಿತು. ಪರಿಣಾಮವಾಗಿ ಅವರಿಗೆ ಬರೋಬ್ಬರಿ ಒಂದು ವರ್ಷದವರೆಗೆ ಜಾಮೀನು ಸಿಗದೆ ಜೈಲಿನಲ್ಲೇ ಉಳಿಯುವಂತಾಯಿತು. ತನಿಖೆ ಮುಂದುವರಿದಂತೆ, ನಟಿ ರನ್ಯಾ ರಾವ್ ಒಟ್ಟಾರೆಯಾಗಿ 102 ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಭಾರಿ ಪ್ರಮಾಣದ ಚಿನ್ನವನ್ನು ಸಾಗಾಟ ಮಾಡಿರುವ ಬೃಹತ್ ಜಾಲದ ಆಘಾತಕಾರಿ ಸತ್ಯಗಳು ಒಂದೊಂದಾಗಿ ಹೊರಬಿದ್ದವು. ನಂತರದಲ್ಲಿ ಏಪ್ರಿಲ್ 22 2026ರಂದು ಆರ್ಥಿಕ ಅಪರಾಧಗಳ ತಡೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿ ಆದೇಶ ನೀಡಿತ್ತು. ಇದೀಗ ಭಾರೀ ಪ್ರಮಾಣ ಕಸ್ಟಮ್ಸ್ ಇಲಾಖೆ ದಂಡ ವಿಧಿಸಿದೆ.

ನಾಲ್ವರಿಗೆ 244 ಕೋಟಿ ದಂಡ:

ರನ್ಯಾ ರಾವ್ ಸೇರಿದಂತೆ ಪ್ರಕರಣದ ನಾಲ್ವರು ಆರೋಪಿಗಳಿಗೆ ಒಟ್ಟಾರೆಯಾಗಿ 244 ಕೋಟಿಗೂ ಅಧಿಕ ದಂಡ ವಿಧಿಸಲಾಗಿದೆ.

- **ತರುಣ್ ಕೊಂಡಾರು ರಾಜು: 49,51,65,230 (ಸುಮಾರು 49.51 ಕೋಟಿ)**
- **ಸಾಹಿಲ್ ಜೈನ್: 53,06,60,430 (ಸುಮಾರು 53.06 ಕೋಟಿ)**
- **ಭರತ್ ಕುಮಾರ್ ಜೈನ್: 53,06,60,430 (ಸುಮಾರು 53.06 ಕೋಟಿ)**
- **ನಟಿ ರನ್ಯಾ ರಾವ್: 89,00,00,000 (89 ಕೋಟಿ)**

**ಸಂಪೂರ್ಣ ಮಾಹಿತಿ ಲಭ್ಯವಿಲ್ಲ: ಪ್ರಿಯಾಂಕ್**

ನಟಿ ರನ್ಯಾ ರಾವ್ ಪ್ರಕರಣದಲ್ಲಿ 89 ಕೋಟಿ ದಂಡ ಪಾವತಿಸಬೇಕು ಎಂಬ ಆದೇಶದ ಕುರಿತು ಸಂಪೂರ್ಣ ಮಾಹಿತಿ ತಮ್ಮ ಬಳಿ ಇನ್ನೂ ಬಂದಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ರನ್ಯಾ ರಾವ್ ಪ್ರಕರಣದಲ್ಲಿ 89 ಕೋಟಿ ದಂಡ ಕಟ್ಟಬೇಕು ಎಂಬ ಆದೇಶದ ಸಂಪೂರ್ಣ ಮಾಹಿತಿ ನನ್ನ ಬಳಿ ಇನ್ನೂ ಬಂದಿಲ್ಲ. ಅದರ ಕಾರಣಗಳೇನು, ಹೇಗೆ ಮತ್ತು ಏಕೆ ಈ ಆದೇಶ ಬಂದಿದೆ ಎಂಬುದನ್ನು ಅಧಿಕೃತ ದಾಖಲೆಗಳನ್ನು ನೋಡಿದ ಬಳಿಕವೇ ಹೇಳಲು ಸಾಧ್ಯ" ಎಂದು ಸ್ಪಷ್ಟಪಡಿಸಿದರು.

# ಸ್ಮಿತ್ ಮಚ್ಚರ್ ಸಾಹಸಕ್ಕೆ ವಿಶ್ವನಾಯಕರ ಪ್ರಶಂಸೆ

ಭಾರಿ ದುರಂತವೊಂದು ತಪ್ಪಿದೆ ಎಂದು ಮೋದಿ ಹೇಳಿದ್ದಾರೆ. ಭಾರತ ಸ್ಮಿತ್ ಮಚ್ಚರ್ ಬಗ್ಗೆ ಹೆಮ್ಮೆಪಡುತ್ತದೆ ಎಂದು ತಿಳಿಸಿ, ಅವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

**ನೆತನ್ಯಾಹು: ನಿಜವಾದ ಹೀರೋ**

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಸ್ಮಿತ್ ಮಚ್ಚರ್ ಅವರನ್ನು ಶ್ಲಾಘಿಸಿದ್ದಾರೆ. ಗಾಯಗೊಂಡಿದ್ದರೂ ದಾಳಿಕೋರನ ವಿರುದ್ಧ ಪ್ರತಿರೋಧ ತೋರಿಸಿ ಕಾಕ್‌ಪಿಟ್ ಬಾಗಿಲು ತೆರೆಯುವ ಮೂಲಕ ಪ್ರಯಾಣಿಕರಿಗೆ ಒಳಬರಲು ಅವಕಾಶ ಮಾಡಿಕೊಟ್ಟರು ಎಂದು ನೆತನ್ಯಾಹು ಹೇಳಿದ್ದಾರೆ.

ಈ ಕ್ರಮದಿಂದ ಪ್ರಯಾಣಿಕರು ದಾಳಿಕೋರನನ್ನು ನಿಯಂತ್ರಿಸಲು ಸಾಧ್ಯವಾಯಿತು ಮತ್ತು 174 ಮಂದಿಯ ಜೀವ ಉಳಿಯಿತು ಎಂದು ಅವರು ಹೇಳಿದ್ದಾರೆ. ಸ್ಮಿತ್ ಮಚ್ಚರ್ ಅವರನ್ನು ನಿಜವಾದ ಹೀರೋ ಎಂದು ಕರೆದ ನೆತನ್ಯಾಹು, ಅವರು ಶೀಘ್ರ ಹಾಗೂ ಸಂಪೂರ್ಣವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

**ಟ್ರಂಪ್ ಕೂಡ ಮೆಚ್ಚುಗೆ**

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಘಟನೆಯಲ್ಲಿ ಸ್ಮಿತ್ ಮಚ್ಚರ್ ಅವರ ಪಾತ್ರವನ್ನು ಶ್ಲಾಘಿಸಿದ್ದಾರೆ. ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರೊಂದಿಗೆ ಮಾತನಾಡಿರುವುದಾಗಿ ತಿಳಿಸಿದ ಟ್ರಂಪ್, ದಾಳಿಯಿಂದ ಗಾಯಗೊಂಡಿದ್ದರೂ ಪರಿಸ್ಥಿತಿಯನ್ನು ಎದುರಿಸಿದ ಪೈಲಟ್‌ರನ್ನು ಹೀರೋ ಎಂದು ಬಣ್ಣಿಸಿದ್ದಾರೆ.

ವಿಮಾನ ತೀವ್ರವಾಗಿ ಕೆಳಕ್ಕೆ ಕುಸಿಯುತ್ತಿದ್ದ ಸಂದರ್ಭದಲ್ಲಿ ಪ್ರಯಾಣಿಕರು ಹಾಗೂ ಇತರರು ಕಾಕ್‌ಪಿಟ್‌ಗೆ ತೆರಳಿ ವಿಮಾನವನ್ನು ನಿಯಂತ್ರಣಕ್ಕೆ ತರಲು ನೆರವಾದ ಘಟನೆಯನ್ನೂ ಟ್ರಂಪ್ ಉಲ್ಲೇಖಿಸಿದ್ದಾರೆ.

**13 ವರ್ಷಗಳ ಅನುಭವದ ಪೈಲಟ್**

ವರದಿಗಳ ಪ್ರಕಾರ, ಸ್ಮಿತ್ ಮಚ್ಚರ್ ದುಬೈನಲ್ಲಿ ವಾಸಿಸುತ್ತಿದ್ದು ಸುಮಾರು 13 ವರ್ಷಗಳ ಪೈಲಟ್ ಅನುಭವ ಹೊಂದಿದ್ದಾರೆ. ಫ್ಲೈದುಬೈನಲ್ಲಿ ನಾಲ್ಕು ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ ಎಂದು ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆ. ಆದರೆ ಫ್ಲೈದುಬೈ ಸಂಸ್ಥೆ ಈವರೆಗೆ ಪೈಲಟ್‌ಗಳ ಗುರುತು ಅಥವಾ ಘಟನೆಯ ಹಿಂದಿನ ಉದ್ದೇಶದ ಕುರಿತು ಸಂಪೂರ್ಣ ವಿವರವನ್ನು ಅಧಿಕೃತವಾಗಿ ಬಹಿರಂಗಪಡಿಸಿಲ್ಲ.

ಸ್ಮಿತ್ ಮಚ್ಚರ್ ಅವರ ಪ್ರತಿರೋಧದ ಜೊತೆಗೆ ವಿಮಾನದಲ್ಲಿದ್ದ ಪ್ರಯಾಣಿಕರ ತಕ್ಷಣದ ಪ್ರತಿಕ್ರಿಯೆಯೂ ದುರಂತ ತಪ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಕೆಲ ಪ್ರಯಾಣಿಕರು ಕಾಕ್‌ಪಿಟ್ ಪ್ರವೇಶಿಸಿ ದಾಳಿಕೋರನನ್ನು ಹಿಡಿದು ನಿಯಂತ್ರಿಸಿದರು. ವಿಮಾನದಲ್ಲಿದ್ದ ದಂತವೈದ್ಯರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದ ಸ್ಮಿತ್ ಮಚ್ಚರ್ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದರು.

ಘಟನೆಯ ಬಳಿಕ ವಿಮಾನ ಸೌದಿ ಅರೇಬಿಯಾದ ತಬೂಕ್‌ನಲ್ಲಿ ತುರ್ತು ಲ್ಯಾಂಡಿಂಗ್ ಮಾಡಿತು. ಬಳಿಕ ಪ್ರಯಾಣಿಕರನ್ನು ಮತ್ತೊಂದು ವಿಮಾನದ ಮೂಲಕ ಇಸ್ರೇಲ್‌ಗೆ ಕರೆದೊಯ್ಯಲಾಯಿತು.

ಕಾಕ್‌ಪಿಟ್‌ನೊಳಗೇ ಪೈಲಟ್ ಮೇಲೆ ದಾಳಿ ನಡೆದಿರುವುದು ವಿಮಾನಯಾನ ಭದ್ರತೆ ಕುರಿತು ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಘಟನೆಯ ಹಿಂದಿನ ಉದ್ದೇಶವೇನು ಎಂಬುದು ತನಿಖೆಯಿಂದ ಇನ್ನಷ್ಟೇ ಸ್ಪಷ್ಟವಾಗಬೇಕಿದೆ. ಫ್ಲೈದುಬೈ ಘಟನೆ ಕುರಿತು ಅಧಿಕಾರಿಗಳೊಂದಿಗೆ ಸಹಕರಿಸುತ್ತಿದ್ದು, ತನಿಖೆ ಮುಂದುವರಿದಿದೆ ಎಂದು ತಿಳಿಸಿದೆ.

# ಚಿನ್ನಕ್ಕಾಗಿ ಭಾರತ– ಪಾಕ್ ಕಾದಾಟ

45 ರನ್‌ಗಳಿಗೆ ಸರ್ವಪತನ ಕಂಡು ಸೋಲಿಗೆ ಶರಣಾಯಿತು. ಬೂಮ್ರಾ, ಅಕ್ಷರ್ ಪಟೇಲ್, ಅಭಿಷೇಕ್ ಶರ್ಮಾ, ತಲಾ ಎರಡು ವಿಕೆಟ್ ಪಡೆದರೆ, ವಾಷಿಂಗ್ಟನ್ ಸುಂದರ್ ಒಂದು ವಿಕೆಟ್ ಪಡೆದರು. ಮತ್ತೊಂದೆಡೆ ಪಾಕಿಸ್ತಾನ ಬಾಂಗ್ಲಾದೇಶವನ್ನು ಮಣಿಸಿ, ಫೈನಲ್‌ಗೆ ಪ್ರವೇಶಿಸಿದೆ.

ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ 13 ಓವರ್ ಗಳಲ್ಲಿ 7 ವಿಕೆಟ್ ಕಳೆದುಕೊಂಡು 111 ರನ್ ಗಳಿಸಿತು. ಈ ಸವಾಲಿನ ಬೆನ್ನಹತ್ತಿದ ಪಾಕಿಸ್ತಾನ 11.3 ಓವರ್ ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. ಈ ಮೂಲಕ ಪಾಕಿಸ್ತಾನ ಏಷ್ಯನ್ ಗೇಮ್ಸ್‌ನಲ್ಲಿ ಫೈನಲ್‌ಗೆ ಪ್ರವೇಶಿಸಿತು. ಮಳೆಯಿಂದಾಗಿ ಪಂದ್ಯವನ್ನು 13 ಓವರ್ ಗಳಿಗೆ ಸೀಮಿತಗೊಳಿಸಲಾಯಿತು.

# ವಾಣಿಜ್ಯ ಎಲ್‌ಪಿಜಿ 60 ರೂ. ಏರಿಕೆ

ಇದರ ಬೆಲೆ 2,810 ರೂ.ಗೆ ಏರಿಕೆಯಾಗಿದೆ. ಅಂದರೆ ಪ್ರತಿ ಸಿಲಿಂಡರ್‌ಗೆ 62.50 ರೂ. ಹೆಚ್ಚಾಗಿದೆ. ಇದಕ್ಕೂ ಮುನ್ನ ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ 9.50 ರೂ. ಏರಿಕೆಯಾಗಿತ್ತು.

ಮುಂಬೈನಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ 2,701 ರೂ.ನಿಂದ 2,764 ರೂ.ಗೆ ಏರಿಕೆಯಾಗಿದೆ. ಚೆನ್ನೈನಲ್ಲಿ 19 ಕೆ.ಜಿ. ಸಿಲಿಂಡರ್ ಬೆಲೆ 2,916.50 ರೂ.ನಿಂದ 2,983 ರೂ. ಏರಿಕೆಯಾಗಿದೆ. ಪ್ರಮುಖ ನಗರಗಳ ಪೈಕಿ ಪಾಟ್ನಾದಲ್ಲಿ ಅಕ್ಟೋಬರ್ 1ರಂದು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಅತ್ಯಧಿಕ ಏರಿಕೆ ದಾಖಲಾಗಿದೆ. ಇಲ್ಲಿ 71.50 ರೂಪಾಯಿ ಹೆಚ್ಚಳವಾಗಿದೆ.

ಗೃಹಬಳಕೆಯ ಎಲ್‌ಪಿಜಿ ದರದಲ್ಲಿ ಬದಲಾವಣೆ ಇಲ್ಲ: ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಏರಿಕೆಯಾಗಿದ್ದರೂ 14.2 ಕೆ.ಜಿ. ತೂಕದ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ದೆಹಲಿಯಲ್ಲಿ ಗೃಹಬಳಕೆಯ ಸಿಲಿಂಡರ್ ಬೆಲೆ 942 ರೂ., ಮುಂಬೈನಲ್ಲಿ 941.50 ರೂ. ಮತ್ತು ಚೆನ್ನೈನಲ್ಲಿ 957.50 ರೂಪಾಯಿಯಷ್ಟೇ ಮುಂದುವರಿದಿದೆ.

# ಅಂತರ್ಜಲ ಮಟ್ಟ ವಿವರ ಸಂಗ್ರಹಕ್ಕೆ ಸೂಚನೆ

ನೀರಿನ ಸಮಸ್ಯೆ ಇರುವ ಗ್ರಾಮಗಳ ಸಂಖ್ಯೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿದೆ. ಬೇಸಿಗೆಯಲ್ಲಿ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಹೀಗಾಗಿ ಮುಂದಿನ ಮುಂಗಾರಿನವರೆಗೆ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಂದಾಜಿಸಿ, ಸಮರ್ಪಕ ಯೋಜನೆ ರೂಪಿಸಿ ಎಂದು ನಿರ್ದೇಶನ ನೀಡಿದರು.

ಪ್ರಸ್ತುತ ಎಷ್ಟು ಗ್ರಾಮಗಳಿಗೆ ಕೊಳವೆ ಬಾವಿ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಬೇಸಿಗೆಯಲ್ಲಿ ಎಷ್ಟು ಕೊಳವೆ ಬಾವಿಗಳು ಬತ್ತಿಹೋಗುವ ಸಾಧ್ಯತೆ ಇದೆ. ಇಲ್ಲಿ ಪರ್ಯಾಯ ಜಲ ಮೂಲವೇನು. ಮೇಲ್ಮೈ ನೀರಿನ ಲಭ್ಯತೆ ಇದ್ದಲ್ಲಿ ಅಥವಾ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದರೆ ಜಲ ಪೂರೈಕೆಗೆ ಎಷ್ಟು ಟ್ಯಾಂಕರ್ ಗಳನ್ನು ಬಾಡಿಗೆಗೆ ಪಡೆಯಬೇಕಾಗುತ್ತದೆ ಎಂಬ ಸಂಪೂರ್ಣ ಯೋಜನೆ ರೂಪಿಸುವಂತೆ ತಿಳಿಸಿದರು.

ಅಂತರ್ಜಲ ಹಾಗೂ ಮೇಲ್ಮೈ ಜಲ ಎರಡೂ ಲಭ್ಯವಿಲ್ಲದಂತಹ ಸೂಕ್ಷ್ಮ ಪ್ರದೇಶಗಳಿಗೆ ಸಮೀಪದಲ್ಲಿ ಎಲ್ಲಿ ನೀರಿನ ಲಭ್ಯತೆ ಇದೆ. ಅದನ್ನು ಗ್ರಾಮಗಳಿಗೆ ಪೂರೈಸಲು ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಈಗಿನಿಂದಲೇ ಯೋಜನೆ ರೂಪಿಸುವಂತೆ ತಿಳಿಸಿದರು.

**ಹಿತಮಿತವಾಗಿ ನೀರು ಬಳಸಲು ಜಾಗೃತಿ ಮೂಡಿಸಿ:**

ರಾಜ್ಯದ ಬಹುತೇಕ ಕಡೆ ಮಳೆಯ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಇದ್ದು, ಗ್ರಾಮೀಣ ಜನರಿಗೆ, ಕೈಗಾರಿಕೆ, ಶಾಲೆ, ಕಾಲೇಜು, ವಿವಿಧ ಸಂಸ್ಥೆಗಳಿಗೆ ಹಿತಮಿತವಾಗಿ ನೀರು ಬಳಸುವಂತೆ ಜಾಗೃತಿ ಮೂಡಿಸಲು ಈಶ್ವರ ಖಂಡ್ರೆ ಸೂಚಿಸಿದರು.

# ಪೈಲಟ್ ಸ್ಮಿತ್ ಮಾತು ವೈರಲ್

ವಿಮಾನದಲ್ಲಿರುವ ಪ್ರಯಾಣಿಕರಿಗೆ ವೈದ್ಯರೊಬ್ಬರು ಸಿಕ್ಕರೆ ಅದೃಷ್ಟ. ಆದರೆ ವೈದ್ಯರಿಲ್ಲದ ಸಂದರ್ಭದಲ್ಲೂ ತರಬೇತಿ ಪಡೆದ ಕ್ಯಾಬಿನ್ ಸಿಬ್ಬಂದಿ ತುರ್ತು ಪರಿಸ್ಥಿತಿಯಲ್ಲಿ ಪ್ರಯಾಣಿಕರ ಜೀವ ಉಳಿಸಲು ನೆರವಾಗಬಲ್ಲರು ಎಂದು ಅವರು ವಿವರಿಸಿದ್ದರು.

"ಅವರು ಶಸ್ತ್ರಚಿಕಿತ್ಸೆ ಮಾಡುವಷ್ಟು ತರಬೇತಿ ಪಡೆದಿದ್ದಾರೆ ಎಂದು ಹೇಳುವುದಿಲ್ಲ. ಆದರೆ ಅಗತ್ಯ ಸಂದರ್ಭದಲ್ಲಿ ಅವರು ನಿಮ್ಮ ಜೀವ ಉಳಿಸಲು ನೆರವಾಗಬಹುದು. ಪರಿಸ್ಥಿತಿ ಹದಗೆಟ್ಟಾಗ ಸಿಬ್ಬಂದಿಯ ಅಗತ್ಯ ಬಹಳ ಮುಖ್ಯ" ಎಂದು ಮಚ್ಚರ್ ಹೇಳಿದ್ದರು.

ವಿಮಾನ ಹಾರಾಟದ ವೇಳೆ ಪೈಲಟ್‌ಗಳು ಏಕೆ ಹೆಚ್ಚು ಮಾತನಾಡುವುದಿಲ್ಲ ಎಂಬುದನ್ನೂ ಅವರು ಸಂದರ್ಶನದಲ್ಲಿ ವಿವರಿಸಿದ್ದರು. ಕಾಕ್‌ಪಿಟ್‌ನಲ್ಲಿ ಗಂಭೀರ ಚರ್ಚೆ ಆರಂಭವಾದರೆ ಗಮನ ಬೇರೆಡೆಗೆ ಹರಿಯುವ ಸಾಧ್ಯತೆ ಇರುವುದರಿಂದ ಪೈಲಟ್‌ಗಳು ಅನಗತ್ಯ ಮಾತುಕತೆ ತಪ್ಪಿಸುತ್ತಾರೆ ಎಂದಿದ್ದರು.

ತೀವ್ರ ಹವಾಮಾನ, ಗುಡುಗು–ಮಿಂಚು ಹಾಗೂ ಭಾರಿ ಪ್ರಕ್ಷುಬ್ಧತೆ ಎದುರಾದಾಗ ಪೈಲಟ್‌ಗಳು ಸಂಪೂರ್ಣವಾಗಿ ಕಾರ್ಯಾಚರಣೆಯತ್ತ ಗಮನ ಕೇಂದ್ರೀಕರಿಸುವ 'ಸ್ವಿಚ್–ಆನ್' ಸ್ಥಿತಿಗೆ ಹೋಗುತ್ತಾರೆ ಎಂದಿದ್ದರು. "ನಾವು ಮಾತನಾಡುವುದಿಲ್ಲ ಎಂದರೆ ನಾವು ಹೆದರಿದ್ದೇವೆ ಎಂದರ್ಥವಲ್ಲ" ಎಂಬ ಅವರ ಮಾತು ಇದೀಗ ನಡೆದ ಘಟನೆಯ ಹಿನ್ನೆಲೆಯಲ್ಲಿ ಮತ್ತಷ್ಟು ಗಮನ ಸೆಳೆದಿದೆ.

ಲಭ್ಯವಿರುವ ಅವರ ವೃತ್ತಿಪರ ಮಾಹಿತಿಯ ಪ್ರಕಾರ, ಸ್ಮಿತ್ ಮಚ್ಚರ್ ಅವರಿಗೆ 13 ವರ್ಷಕ್ಕೂ ಹೆಚ್ಚು ವಾಣಿಜ್ಯ ವಿಮಾನ ಹಾರಾಟದ ಅನುಭವವಿದೆ. ಬೋಯಿಂಗ್–737 ವಿಮಾನದಲ್ಲಿ 9,750ಕ್ಕೂ ಅಧಿಕ ಹಾರಾಟ ಗಂಟೆಗಳ ಅನುಭವ ಹೊಂದಿದ್ದಾರೆ ಎನ್ನಲಾಗಿದೆ.

2011ರಲ್ಲಿ ಸ್ಪೈಸ್‌ಜೆಟ್‌ಗೆ ಸೇರಿದ ಅವರು ಲೈನ್ ಟ್ರೈನಿಂಗ್ ಕ್ಯಾಪ್ಟನ್ ಹಾಗೂ ಸೀನಿಯರ್ ಕಮಾಂಡರ್ ಸೇರಿದಂತೆ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. 2022ರ ಜೂನ್‌ನಲ್ಲಿ ಫ್ಲೈದುಬೈಗೆ ಡೈರೆಕ್ಟ್ ಎಂಟ್ರಿ ಕ್ಯಾಪ್ಟನ್ ಆಗಿ ಸೇರ್ಪಡೆಯಾಗಿದ್ದರು.

**17 ಸಾವಿರ ಅಡಿಗೂ ಹೆಚ್ಚು ಕುಸಿದ ವಿಮಾನ**

ಫ್ಲೈದುಬೈಯ FZ1073 ವಿಮಾನ ಬುಧವಾರ ದುಬೈಯಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದಾಗ ಕಾಕ್‌ಪಿಟ್‌ನಲ್ಲಿ ತುರ್ತು ಪರಿಸ್ಥಿತಿ ಎದುರಿಸಿತು. 34,000 ಅಡಿ ಎತ್ತರದಲ್ಲಿದ್ದ ವಿಮಾನ ಕೆಲವೇ ಸಮಯದಲ್ಲಿ 17,000 ಅಡಿಗೂ ಹೆಚ್ಚು ಕೆಳಗೆ ಇಳಿಯಿತು. ಬಳಿಕ ವಿಮಾನವನ್ನು ಸೌದಿ ಅರೇಬಿಯಾದ ತಬೂಕ್‌ನ ಪ್ರಿನ್ಸ್ ಸುಲ್ತಾನ್ ಬಿನ್ ಅಬ್ದುಲ್ ಅಜೀಜ್ ವಿಮಾನ ನಿಲ್ದಾಣಕ್ಕೆ ತಿರುಗಿಸಲಾಯಿತು.

ವಿಮಾನದಲ್ಲಿ 174 ಪ್ರಯಾಣಿಕರು, ಅವರಲ್ಲಿ 27 ಮಕ್ಕಳು ಇದ್ದರು ಎನ್ನಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ದೃಶ್ಯಗಳಲ್ಲಿ ಸ್ಮಿತ್ ಮಚ್ಚರ್ ರಕ್ತಸಿಕ್ತ ಸ್ಥಿತಿಯಲ್ಲಿ ಆಮ್ಲಜನಕದ ಮಾಸ್ಕ್ ಧರಿಸಿ ವಿಮಾನದ ಗ್ಯಾಲಿಯಲ್ಲಿ ಮಲಗಿರುವುದು ಕಂಡುಬಂದಿದೆ.

ವರದಿಗಳ ಪ್ರಕಾರ, ಸಹ ಪೈಲಟ್ ನೊಂದಿಗೆ ನಡೆದ ಹಿಂಸಾತ್ಮಕ ಸಂಘರ್ಷದಲ್ಲಿ ಮಚ್ಚರ್ ಗಂಭೀರವಾಗಿ ಗಾಯಗೊಂಡರೂ ವಿಮಾನದ ನಿಯಂತ್ರಣ ಹಾಗೂ ಪ್ರಯಾಣಿಕರ ಸುರಕ್ಷತೆಯ ಕಾರ್ಯದಲ್ಲಿ ನೆರವಾಗಿದ್ದರು.

# ಪುರಾವೆ ಕೇಳಿದ ಪ್ರಿಯಾಂಕ್

ಜೀವನೋಪಾಯಕ್ಕೂ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಸ್ಪಷ್ಟಪಡಿಸಿದರು.

ಶೇ.75ರಷ್ಟು ಶಾಸಕರು ಕಮಿಷನ್ ಪಡೆಯದೆ ಕೆಲಸ ಮಾಡುತ್ತಿಲ್ಲ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, "ಯಾರ್ಯಾರು ಕಮಿಷನ್ ಕೇಳಿದ್ದಾರೆ ಎಂಬ ಪಟ್ಟಿಯನ್ನು ಕೊಡಿ. ಪ್ರತಿಬಾರಿಯೂ ಹೀಗೆ ಆರೋಪ ಮಾಡುತ್ತೀರಿ. ಚಿತ್ತಾಪುರ, ಕಲಬುರಗಿ ಅಥವಾ ಮೈಸೂರಿನಲ್ಲಿ ಇಂತಹ ಘಟನೆ ನಡೆದಿದೆಯೇ ಎಂಬುದನ್ನೂ ಸ್ಪಷ್ಟಪಡಿಸಿ" ಎಂದು ಪ್ರಶ್ನಿಸಿದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಖಾಸಗಿ ಲೆಟರ್‌ಹೆಡ್‌ಗಳ ಮೂಲಕ ಗುತ್ತಿಗೆದಾರರ ಕೆಲಸಗಳು ನಡೆಯುತ್ತಿರಲಿಲ್ಲವೇ ಈಗ ನಮ್ಮ ಶಾಸಕರ ಲೆಟರ್‌ಹೆಡ್‌ನಲ್ಲಿ ಕೆಲಸ ನಡೆಯುತ್ತಿದೆ ಎಂಬ ಆರೋಪ ಮಾಡಲಾಗುತ್ತಿದೆ. ಆದರೆ ಅಭಿವೃದ್ಧಿಗೆ ಅಗತ್ಯವಿರುವ ಕೆಲಸಗಳು, ಕಾಮಗಾರಿಗಳ ಅಗತ್ಯತೆ ಆಧರಿಸಿಯೇ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಜೆಜೆಎಂ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಗುತ್ತಿಗೆದಾರರು ನೀಡಿದ ಸಲಹೆಗಳ ಆಧಾರದ ಮೇಲೆ ಬಿಲ್‌ಗಳ ಕ್ಲಿಯರೆನ್ಸ್ ಮಾಡಲಾಗಿದೆ. ಯಾರಿಗಾದರೂ ಬಲವಂತವಾಗಿ ಕಾಮಗಾರಿ ನೀಡಬೇಕು ಅಥವಾ ನಿರ್ದಿಷ್ಟ ವ್ಯಕ್ತಿಗೆ ನೀಡಬೇಕು ಎಂದು ಸರ್ಕಾರ ಒತ್ತಡ ಹೇರುತ್ತಿಲ್ಲ. ಕೆಲವೊಮ್ಮೆ ಆಡಳಿತಾತ್ಮಕ ಕಾರಣಗಳಿಂದ ಪಾವತಿ ವಿಳಂಬವಾದರೆ ಅದನ್ನು ಸಹಿಸಿಕೊಳ್ಳಬೇಕಾಗುತ್ತದೆ ಎಂದರು

# ಉರ್ದು ಹಬ್ಬ: ಕರವೇ ವಿರೋಧ

'ಕನ್ನಡಿಗರು–ಉರ್ದು ಭಾಷಿಕರ ನಡುವೆ ಸಂಘರ್ಷಕ್ಕೆ ಕಾರಣವಾಗಬಾರದು'

ಉರ್ದು ಸೇರಿದಂತೆ ಯಾವುದೇ ಭಾಷೆಯ ವಿರೋಧಿಗಳಲ್ಲ ಎಂದು ಸ್ಪಷ್ಟಪಡಿಸಿರುವ ಕರವೇ, ಯಾವುದೇ ಭಾಷೆ ಅಥವಾ ಭಾಷಿಕ ಸಮುದಾಯದ ವಿರುದ್ಧ ದ್ವೇಷ ಇಲ್ಲ ಎಂದಿದೆ. ಆದರೆ ವಿಧಾನಸೌಧದಂತಹ ಪ್ರಮುಖ ಸರ್ಕಾರಿ ಕಟ್ಟಡದಲ್ಲಿ ನಿರ್ದಿಷ್ಟ ಭಾಷೆಯ ಹಬ್ಬ ಆಯೋಜಿಸುವ ನಿರ್ಧಾರವು ಅನಗತ್ಯ ವಿವಾದಕ್ಕೆ ಕಾರಣವಾಗಬಹುದು ಎಂದು ಹೇಳಿದೆ.

ಹಿಂದೆ ಉರ್ದು ವಾರ್ತೆ ಸೇರಿದಂತೆ ಭಾಷಾ ವಿಚಾರಗಳಿಗೆ ಸಂಬಂಧಿಸಿದಂತೆ ನಡೆದಿದ್ದ ಸಂಘರ್ಷಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಇಂತಹ ಸೂಕ್ಷ್ಮ ವಿಚಾರಗಳಲ್ಲಿ ಸರ್ಕಾರ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದು ಸಂಘಟನೆ ಒತ್ತಾಯಿಸಿದೆ.

**'ಮುಂದೆ ಹಿಂದಿ, ತಮಿಳು, ತೆಲುಗು ಹಬ್ಬಗಳಿಗೂ ಅವಕಾಶವೇ?'**

ವಿಧಾನಸೌಧದ ಮುಂದೆ ಉರ್ದು ಹಬ್ಬಕ್ಕೆ ಅವಕಾಶ ನೀಡಿದ ಬಳಿಕ ಇದೇ ರೀತಿಯಲ್ಲಿ ಹಿಂದಿ, ತಮಿಳು, ತೆಲುಗು, ಮರಾಠಿ ಸೇರಿದಂತೆ ವಿವಿಧ ಭಾಷೆಗಳ ಹಬ್ಬಗಳಿಗೂ ಅವಕಾಶ ನೀಡುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಕರವೇ ಆತಂಕ ವ್ಯಕ್ತಪಡಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ವಿಚಾರದಲ್ಲಿ ಕೂಡಲೇ ಮಧ್ಯಪ್ರವೇಶಿಸಿ ಉರ್ದು ಹಬ್ಬ ಆಯೋಜನೆಯ ನಿರ್ಧಾರವನ್ನು ಕೈಬಿಡಬೇಕು ಎಂದು ಆಗ್ರಹಿಸಿದೆ. ಬೆಂಗಳೂರಿನಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಲವು ಸ್ಥಳಗಳಿದ್ದು, ಉರ್ದು ಹಬ್ಬವನ್ನು ವಿಧಾನಸೌಧದ ಮೆಟ್ಟಿಲುಗಳ ಮೇಲೆಯೇ ನಡೆಸುವ ಅಗತ್ಯವಿಲ್ಲ ಎಂದು ಹೇಳಿದೆ.

ಸರ್ಕಾರ ತನ್ನ ನಿರ್ಧಾರವನ್ನು ಮರುಪರಿಶೀಲಿಸದಿದ್ದರೆ ಕಾರ್ಯಕ್ರಮಕ್ಕೆ ಅವಕಾಶ ನೀಡುವುದಿಲ್ಲ ಎಂದು ಕರವೇ ಎಚ್ಚರಿಕೆ ನೀಡಿದೆ. ರಾಜ್ಯದ ಶಾಂತಿ, ಸೌಹಾರ್ದ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುವಂತಹ ಯಾವುದೇ ಬೆಳವಣಿಗೆಗೆ ಸಂಘಟನೆ ಸುಮ್ಮನಿರುವುದಿಲ್ಲ ಎಂದು ಕರವೇ ನಾರಾಯಣ ಗೌಡ ಸರ್ಕಾರಕ್ಕೆ ಎಚ್ಚರಿಕೆ ನೀಡಿದರೆ.

# ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ

ಮತಗಳನ್ನು ಟಾರ್ಗೆಟ್ ಮಾಡಿದ್ದಾರೆ ಎಂದು ಅವರು ಆರೋಪಿಸಿದರು.

ಈ ಎಲ್ಲಾ ಅಕ್ರಮಗಳ ಬಗ್ಗೆ ತನಿಖೆಯಾಗಲೇ ಬೇಕು. ಈ ಕೆಲಸವನ್ನು ಚುನಾವಣಾ ಆಯೋಗ ಮಾಡಲೇಬೇಕು ಎಂದು ಅವರು ಹೇಳಿದರು.

ಕರ್ನಾಟಕದ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಿಂದ ಆರಂಭವಾದ ಹೋರಾಟ ಇದೀಗ ದೇಶವ್ಯಾಪಿ ಚರ್ಚೆಯಾಗಿ ಪರಿಣಮಿಸಿದೆ. ಎಸ್‌ಐಆರ್ ಆರಂಭವಾದಾಗಿನಿಂದ ರಾಜ್ಯ ಸರ್ಕಾರವು ಚುನಾವಣಾ ಆಯೋಗಕ್ಕೆ ಅಗತ್ಯ ಸಹಕಾರ ಮತ್ತು ಪ್ರೋತ್ಸಾಹ ನೀಡಿದೆ. ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷಗಳು ಬೂತ್ ಮಟ್ಟದ ಏಜೆಂಟ್‌ಗಳನ್ನು (ಬಿಎಲ್‌ಎ) ನೇಮಿಸಿವೆ. ಆದರೆ ಇದೀಗ ಫಾರ್ಮ್–7 ಮೂಲಕ ಮತದಾರರ ಹೆಸರುಗಳನ್ನು ಅಳಿಸುವ ಪ್ರಕ್ರಿಯೆ ಕುರಿತು ಗಂಭೀರ ಆರೋಪಗಳು ಕೇಳಿಬರುತ್ತಿವೆ ಎಂದು ಡಿಕೆಶಿ ಹೇಳಿದ್ದಾರೆ.

ಪೂರ್ವಮುದ್ರಿತ ಮತದಾರರ ವಿವರಗಳನ್ನು ಬಳಸಿ ಫಾರ್ಮ್–7 ಅರ್ಜಿಗಳನ್ನು ಸಲ್ಲಿಸಲಾಗುತ್ತಿದೆ ಎಂಬುದು ಆತಂಕಕ್ಕೆ ಕಾರಣವಾಗಿದೆ. ಇಂತಹ ಅರ್ಜಿಗಳ ಮೂಲಕ ಅಲ್ಪಸಂಖ್ಯಾತರು, ದಲಿತರು, ಒಬಿಸಿ ಸೇರಿದಂತೆ ವಿವಿಧ ಸಮುದಾಯಗಳ ಮತದಾರರನ್ನು ಗುರಿಯಾಗಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ.

ಭಾಲ್ಕಿ, ನರಸಿಂಹರಾಜ ಸೇರಿದಂತೆ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಈ ರೀತಿಯ ಅರ್ಜಿಗಳು ಸಲ್ಲಿಕೆಯಾಗಿರುವ ಮಾಹಿತಿ ಲಭ್ಯವಾಗಿದೆ ಎಂದು ಅವರು ಹೇಳಿದ್ದಾರೆ. ಭಾಲ್ಕಿ ಕ್ಷೇತ್ರವೊಂದರಲ್ಲೇ ಸಾವಿರಾರು ಫಾರ್ಮ್–7 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಡಿಕೆಶಿ ಉಲ್ಲೇಖಿಸಿದ್ದಾರೆ.

ಮತದಾರರ ವೈಯಕ್ತಿಕ ವಿವರಗಳುಳ್ಳ ಪೂರ್ವಮುದ್ರಿತ ಅರ್ಜಿಗಳು ಸಂಬಂಧಪಟ್ಟವರಿಗೆ ಹೇಗೆ ದೊರಕಿದವು? ಈ ಮಾಹಿತಿಯನ್ನು ಯಾರು ನೀಡಿದ್ದಾರೆ? ಎಂಬ ಪ್ರಶ್ನೆಯನ್ನು ಡಿಕೆ ಶಿವಕುಮಾರ್ ಎತ್ತಿದ್ದಾರೆ.

ಕೆಲವು ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಫಾರ್ಮ್–7 ಮೂಲಕ ಮತದಾರರ ಹೆಸರುಗಳನ್ನು ತೆಗೆಸಲು ಮುಂದಾಗಿದ್ದಾರೆ ಎಂಬುದು ಡಿಕೆಶಿ ಅವರ ಆರೋಪ. ಭಾಲ್ಕಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಿಜೆಪಿ ಕಾರ್ಯಕರ್ತರಿಂದ ಇಂತಹ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಅವರು ಹೇಳಿದ್ದಾರೆ.

ಈ ಆರೋಪಗಳು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದು, ಸಾಮೂಹಿಕ ಫಾರ್ಮ್–7 ಅರ್ಜಿಗಳ ಮೂಲಕ ಮತದಾರರ ಹೆಸರುಗಳನ್ನು ಅಳಿಸುವ ಕುರಿತು ವಿವಿಧೆಡೆ ಆಕ್ಷೇಪಗಳು ವ್ಯಕ್ತವಾಗಿವೆ. ಭಾಲ್ಕಿ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಮತದಾರರ ವಿವರಗಳನ್ನು ಹೊಂದಿರುವ ಅರ್ಜಿಗಳನ್ನು ತಮ್ಮೊಂದಿಗೆ ಯಾವುದೇ ಸಂಬಂಧವಿಲ್ಲದವರು ಸಲ್ಲಿಸಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ. ಈ ಬೆಳವಣಿಗೆಗಳ ಕುರಿತು ಚುನಾವಣಾ ಆಯೋಗದ ಮುಂದೆ ದೂರು ಸಲ್ಲಿಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# ಬೆಂಗಳೂರಲ್ಲಿ ವರುಣಾರ್ಭಟ: ಬಸ್, ಟ್ರಕ್ ಮೇಲೆ ಉರುಳಿದ ಮರ

ಬೆಂಗಳೂರು, ಅ.1–ರಾಜಧಾನಿ ಬೆಂಗಳೂರಿನಲ್ಲಿ ಮಳೆರಾಯನ ಆರ್ಭಟ ಮುಂದುವರಿದಿದ್ದು, ನಗರದ ಹಲವು ಪ್ರದೇಶಗಳಲ್ಲಿ ಭಾರಿಮಳೆಯಾಗಿದೆ.ಮಳೆ–ಗಾಳಿಯ ರಭಸಕ್ಕೆ ವಿವಿಧೆಡೆ ಮರಗಳು,

**ಹಲವು ಬಡಾವಣೆಗಳು ಜಲಾವೃತ**

ಕೊಂಬೆಗಳು ಉರುಳಿ ಬಿದ್ದಿದ್ದು, ಬಿಎಂಟಿಸಿ ಬಸ್, ಟ್ರಕ್, ಕಾರು ಹಾಗೂಬೈಕ್‌ಗಳುಹಾನಿಗೊಳಗಾಗಿವೆ. ಕೆಲವು ಕಡೆ ವಿದ್ಯುತ್ ತಂತಿಗಳ ಮೇಲೂಮರಗಳುಬಿದ್ದಪರಿಣಾಮ ಕೆಲಕಾಲ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ಬಸವನಗುಡಿ, ಯಲಹಂಕ, ಜಕ್ಕೂರು, ದಾಸರಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ, ಕೊಡಿಗೆಹಳ್ಳಿ, ಕಾಡಗೊಂಡನಹಳ್ಳಿ, ಕುಶಾಲ್ ನಗರ, ವರ್ತೂರು, ಈಜೀಪುರ, ಮಹದೇವಪುರ,ಕಾವಲ್‌ಬೈರಸಂದ್ರ, ದೊಡ್ಡಬಿದರಕಲ್ಲು, ಶೆಟ್ಟಿಹಳ್ಳಿ, ಕೋರಮಂಗಲ, ಅಡುಗೋಡಿ ಹಾಗೂ ಸಿಂಗಸಂದ್ರ ಸೇರಿದಂತೆ ನಗರದ ಹಲವು ಭಾಗಗಳಲ್ಲಿ ಮಳೆ ಅಬ್ಬರಿಸಿದೆ. ಸಂಜೆ ಕಚೇರಿ ಮುಗಿಸಿ ಮನೆಗಳತ್ತ ತೆರಳುತ್ತಿದ್ದ ಸಾರ್ವಜನಿಕರು ಮಳೆ ಹಾಗೂ ರಸ್ತೆಗಳಲ್ಲಿ ನಿಂತ ನೀರಿನಿಂದ ತೊಂದರೆ ಅನುಭವಿಸಿದರು.

**ಬಿಎಂಟಿಸಿ ಬಸ್ ಮೇಲೆ ಬಿದ್ದ ಮರ**

ಯಶವಂತಪುರದ ಎಚ್‌ಎಂಟಿ ಲೇಔಟ್ ಬಳಿಯ ಗಂಗಮ್ಮ ಸರ್ಕಲ್‌ನಲ್ಲಿ ಮಳೆಗಾಳಿಗೆ ಬೃಹತ್ ಮರವೊಂದು ಬಿಎಂಟಿಸಿ ಬಸ್ ಮೇಲೆ ಉರುಳಿ ಬಿದ್ದಿದೆ. ಮರ ಬಿದ್ದ ರಭಸಕ್ಕೆ ಬಸ್‌ಗೆ ಭಾರೀ ಹಾನಿಯಾಗಿದ್ದು, ಸಂಪೂರ್ಣ ಜಖಂಗೊಂಡಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸ್ಥಳಕ್ಕೆ ಧಾವಿಸಿದ ಪಾಲಿಕೆ ಸಿಬ್ಬಂದಿ ಮರ ತೆರವು ಕಾರ್ಯ ಕೈಗೊಂಡರು.

ಥಣಿಸಂದ್ರ ಹಾಗೂ ಸಂಪಿಗೆಹಳ್ಳಿ ರಸ್ತೆಯಲ್ಲಿಯೂ ಮಳೆಯಿಂದ ಮರಗಳು ರಸ್ತೆಗೆ ಉರುಳಿ ಬಿದ್ದಿದ್ದು, ಕೆಲಕಾಲ ಸಂಚಾರಕ್ಕೆ ಅಡಚಣೆ ಉಂಟಾಯಿತು.



ಮುನೇನಕೊಳಲು ಪ್ರದೇಶದ ಗಾಂಧೀನಗರದ ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಬೃಹತ್ ಮರ ಬಿದ್ದಿದೆ. ಹೆಗಡೆನಗರದಲ್ಲಿಯೂ ಮರವೊಂದು ರಸ್ತೆಗೆ ಉರುಳಿ ಬಿದ್ದಿರುವ ಬಗ್ಗೆ ವರದಿಯಾಗಿದೆ.

**ಟ್ರಕ್, ಕಾರು, ಬೈಕ್‌ಗಳಿಗೂ ಹಾನಿ**

ಬಸವನಗುಡಿ,ಕೆ.ಆರ್.ಮಾರುಕಟ್ಟೆ ಮಾರ್ಗದಲ್ಲಿ ಮಳೆಯ ರಭಸಕ್ಕೆ ಮರ ಟ್ರಕ್ ಮೇಲೆ ಬಿದ್ದಿದೆ. ಮರ ಬಿದ್ದ ಪರಿಣಾಮ ಟ್ರಕ್‌ಗೆ ಭಾರೀ ಹಾನಿಯಾಗಿದ್ದು,ಪಾಲಿಕೆಯ ಅರಣ್ಯ ವಿಭಾಗದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಮರ ತೆರವುಗೊಳಿಸಿದ್ದಾರೆ.

ಕೋರಮಂಗಲ ವ್ಯಾಪ್ತಿಯ ಅಡುಗೋಡೆಯಲ್ಲಿ ಕಾರಿನ ಮೇಲೆ ಮರ ಬಿದ್ದಿದ್ದು, ಕಾರು ಜಖಂಗೊಂಡಿದೆ. ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕೆಂಪೇಗೌಡನಗರದ ಗುಟ್ಟಹಳ್ಳಿಯಲ್ಲಿ ಬೈಕ್ ಮೇಲೆ ಮರ ಉರುಳಿ ಬಿದ್ದಿದ್ದು, ಬೈಕ್‌ಗೂ ಹಾನಿಯಾಗಿದೆ.

ಮಹದೇವಪುರ, ಕೇಂದ್ರ ಹಾಗೂ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳ ಮೇಲೆ ಮರ ಮತ್ತು ಕೊಂಬೆಗಳು ಬಿದ್ದಿವೆ. ಇದರಿಂದ ಕೆಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ದಕ್ಷಿಣ ನಗರ ಪಾಲಿಕೆಯ ಸಿಂಗಸಂದ್ರದಲ್ಲಿಯೂ ಬೃಹತ್ ಮರ ವಿದ್ಯುತ್ ತಂತಿಗಳ ಮೇಲೆ ಬಿದ್ದಿರುವ ಬಗ್ಗೆ ವರದಿಯಾಗಿದೆ.

ಕಲ್ಯಾಣನಗರ ಹಾಗೂ ಸೆಂಟ್ರಲ್ ಜೈಲು ಸಮೀಪದ ಶ್ರೀಸಾಯಿ ಲೇಔಟ್‌ನಲ್ಲಿಯೂ ದೊಡ್ಡಗಾತ್ರದ ಮರ ಬಿದ್ದಿರುವ ಘಟನೆಗಳು ವರದಿಯಾಗಿವೆ ಎಂದು ಜಿಬಿಎ ಸಹಾಯವಾಣಿ ಅಧಿಕಾರಿಗಳು ತಿಳಿಸಿದ್ದಾರೆ.

**ಲೋ ಲೆವೆಲ್ ಪಾರ್ಕ್ ಜಲಾವೃತ**

ತಡರಾತ್ರಿ ಸುರಿದ ಭಾರಿ ಮಳೆಗೆ ಸದಾಶಿವನಗರದ ಲೋ ಲೆವೆಲ್ ಪಾರ್ಕ್ ಸಂಪೂರ್ಣ ಜಲಾವೃತವಾಗಿತ್ತು. ಅರಮನೆನಗರದ ವಾರ್ಡ್‌ನಲ್ಲಿರುವ ಉದ್ಯಾನವನದಲ್ಲಿ ನೀರು ತುಂಬಿದ್ದರಿಂದ ಮಕ್ಕಳ ಆಟಿಕೆ ಪರಿಕರಗಳು ಸೇರಿದಂತೆ ಹಲವು ಸಾಮಗ್ರಿಗಳು ನೀರಿನಲ್ಲಿ ತೇಲುತ್ತಿದ್ದವು. ಇದರಿಂದ ಉದ್ಯಾನವನಕ್ಕೆ ಆಗಮಿಸುವ ಸಾರ್ವಜನಿಕರು ತೊಂದರೆ ಅನುಭವಿಸಿದರು.

**ತೆರವು ಕಾರ್ಯಕ್ಕೆ ಸಿಬ್ಬಂದಿ**

ಮಳೆ ಹಿನ್ನೆಲೆಯಲ್ಲಿ ನಗರದ ಹಲವು ರಸ್ತೆಗಳ ಮೇಲೆ ನೀರು ನಿಂತಿದ್ದು, ಕೆಲವೆಡೆ ಮರ ಹಾಗೂ ಕೊಂಬೆಗಳು ಬಿದ್ದ ಪರಿಣಾಮ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಮಾಹಿತಿ ಲಭ್ಯವಾಗುತ್ತಿದ್ದಂತೆ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಗಳಿಗೆ ತೆರಳಿ ಮರ, ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯ ನಡೆಸಿದ್ದಾರೆ.

# ಕಾಲೇಜು ವಿದ್ಯಾರ್ಥಿಯ ಬರ್ಬರ ಹತ್ಯೆ

ಬೆಂಗಳೂರು, ಅ.1: ಕಾಲೇಜು ಸಮೀಪ ನಡೆದ ಘರ್ಷಣೆಯ ಬಳಿಕ ಬಿಕಾಂ ಪ್ರಥಮ ವರ್ಷದ ವಿದ್ಯಾರ್ಥಿಯೊಬ್ಬನನ್ನು ಸಹಪಾಠಿ ಸೇರಿದಂತೆ ಆರು ಮಂದಿ ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ನಗರದ ನಾಗರಭಾವಿಯಲ್ಲಿ ನಡೆದಿದೆ.

ನಾಗರಭಾವಿಯ ಮಹೇಶ್ ಪಿಯು ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಕಾಂ ವ್ಯಾಸಂಗ ಮಾಡುತ್ತಿದ್ದ ಯೋಗೇಶ್ ಪಾಪಣ್ಣ (19) ಮೃತಪಟ್ಟ ವಿದ್ಯಾರ್ಥಿ.

ಪೊಲೀಸರ ಪ್ರಾಥಮಿಕ ಮಾಹಿತಿ ಪ್ರಕಾರ, ಕಾಲೇಜಿನ ಹಿಂಭಾಗಕ್ಕೆ ಯೋಗೇಶ್‌ನನ್ನು ಕರೆಸಿಕೊಂಡಿದ್ದ ಗುಂಪಿನೊಂದಿಗೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಯೋಗೇಶ್‌ನ ಸಹಪಾಠಿ ಭುವನ್ ಸೇರಿದಂತೆ ಐವರು ಆತನ ಮೇಲೆ ಹರಿತವಾದ ಆಯುಧದಿಂದ ದಾಳಿ ನಡೆಸಿದ್ದಾರೆ ಎನ್ನಲಾಗಿದೆ. ದಾಳಿ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ ಯೋಗೇಶ್‌ನನ್ನು ಸ್ನೇಹಿತರು ತಕ್ಷಣ ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆತ ಮೃತಪಟ್ಟಿದ್ದಾನೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಮುಂದಿನ ಕಾನೂನು ಪ್ರಕ್ರಿಯೆಗಳನ್ನು ಪೊಲೀಸರು ಕೈಗೊಂಡಿದ್ದಾರೆ.

**ಪರಿಚಿತರ ನಡುವಿನ ಗಲಾಟೆ**

ಘಟನೆ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಿದ್ದಾರೆ. ಆರಂಭದಲ್ಲಿ ಹೊರಗಿನ ವ್ಯಕ್ತಿಗಳು ದಾಳಿ ನಡೆಸಿರಬಹುದು ಎಂಬ ಶಂಕೆ ವ್ಯಕ್ತವಾಗಿದ್ದರೂ, ಪ್ರಾಥಮಿಕ ತನಿಖೆಯಲ್ಲಿ ಪರಿಚಿತರ ನಡುವಿನ ವಿವಾದವೇ ಘಟನೆಗೆ ಕಾರಣವಾಗಿರುವ ಸಾಧ್ಯತೆ ಕಂಡುಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆದರೆ ಗಲಾಟೆಗೆ ನಿಖರ ಕಾರಣವೇನು, ದಾಳಿಯಲ್ಲಿ ಪ್ರತಿಯೊಬ್ಬ ಆರೋಪಿಯ ಪಾತ್ರವೇನು ಎಂಬುದನ್ನು ತನಿಖೆಯಿಂದ ಖಚಿತಪಡಿಸಿಕೊಳ್ಳಬೇಕಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧಕಾರ್ಯ ಮುಂದುವರಿಸಿದ್ದಾರೆ.

# ಪ್ರತಿಯೊಂದು ಭಾಷೆಗೂ ಅದರದ್ದೇ ಸಂಸ್ಕೃತಿ ಇದೆ: ಖಾದರ್

ಬೆಂಗಳೂರು, ಅ. 1: ಉರ್ದು ಹಬ್ಬ ವಿರೋಧದ ವಿಚಾರವನ್ನು ಚರ್ಚಿಸಬೇಕಾದ ವಿಷಯವಲ್ಲ "ಪ್ರತಿಯೊಂದು ಭಾಷೆಗೂ ಅದರದ್ದೇ ಆದ ಸಂಸ್ಕೃತಿ ಇದೆ. ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದರು . ಆರೋಗ್ಯ ಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಉರ್ದು ಸಾಹಿತ್ಯ ಪ್ರಶಸ್ತಿ ನೀಡುತ್ತಿದ್ದೇವೆ. ಯಾವುದೇ ಕಾರ್ಯಕ್ರಮದಿಂದ ಒಳಿತಾಗಬೇಕು, ತೊಂದರೆಯಾಗಬಾರದು. ನಮ್ಮ ಉದ್ದೇಶ ಬಲಿಷ್ಠ ಭಾರತ ಕಟ್ಟುವುದು" ಎಂದು ಹೇಳಿದರು.

**ಔಷಧಿ ಬೆಲೆ ನಿಯಂತ್ರಣದತ್ತ ಗಮನ**

ಔಷಧಿ ಬೆಲೆ ಏರಿಕೆಯ ಬಗ್ಗೆ ಕಟುವಾಗಿ ಪ್ರತಿಕ್ರಿಯಿಸಿದ ಸಚಿವರು, ಒಂದು ತಿಂಗಳ ಹಿಂದೆ ಈ ಬಗ್ಗೆ ಪತ್ರ ಬರೆದಿದ್ದಾಗಿ ತಿಳಿಸಿದರು. "86 ರೂಪಾಯಿಗೆ ಮಾರಾಟವಾಗಬೇಕಿದ್ದ ಔಷಧಿ 4,528 ರೂಪಾಯಿಗೆ, 160 ರೂಪಾಯಿಯ ಔಷಧಿ 7,110 ರೂಪಾಯಿಗೆ ಮಾರಾಟವಾಗುತ್ತಿದೆ. ಆಸ್ಪತ್ರೆಗಳಲ್ಲಿ ಲ್ಯಾಂಡಿಂಗ್ ಮತ್ತು ಸೆಂಡಿಂಗ್ ವೆಚ್ಚವನ್ನು ಪಾರದರ್ಶಕವಾಗಿ ತಿಳಿಸಬೇಕು" ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರವು ಓಕಕಂಗೆ ಸಂಪೂರ್ಣ ದರ ನಿಗದಿ ಅಧಿಕಾರ ನೀಡಬೇಕು ಎಂದು ಒತ್ತಾಯಿಸಿದ ಅವರು, ಔಷಧಿ ಬೆಲೆ ನಿಯಂತ್ರಣ 2013ರ ಆದೇಶದಲ್ಲಿ ತಿದ್ದುಪಡಿ ತರಬೇಕು ಮತ್ತು ವಿಸ್ತೃತ ರಾಷ್ಟ್ರೀಯ ಅಗತ್ಯ ಔಷಧಗಳ ಪಟ್ಟಿಯನ್ನು ಪ್ರಕಟಿಸಬೇಕು ಎಂದು ಹೇಳಿದರು.

**ದಾಳಿಯಲ್ಲಿ ಪತ್ತೆಯಾದ ದುಬಾರಿ ಔಷಧಿಗಳು**

ಸೆಪ್ಟೆಂಬರ್ 25 ಮತ್ತು 26ರಂದು ಆಸ್ಪತ್ರೆಗಳು ಮತ್ತು ಮೆಡಿಕಲ್ ಸ್ಟೋರ್‌ಗಳ ಮೇಲೆ ನಡೆಸಿದ ದಾಳಿಯಲ್ಲಿ 768ಕ್ಕೂ ಹೆಚ್ಚು ಬಗೆಯ ಸಾಮಗ್ರಿ ಮತ್ತು 189 ದುಬಾರಿ ಔಷಧಿಗಳು ಪತ್ತೆಯಾಗಿವೆ. ಲ್ಯಾಂಡಿಂಗ್ ವೆಚ್ಚ ಮತ್ತು ಒಖಿಕ ನಡುವೆ ಭಾರಿ ವ್ಯತ್ಯಾಸ ಕಂಡುಬಂದಿದೆ ಎಂದು ಸಚಿವರು ತಿಳಿಸಿದರು.

ಔಷಧಿ ವಿಚಾರದಲ್ಲಿ ಕ್ರಮ ಕೈಗೊಂಡ ರಾಜ್ಯಗಳ ಪೈಕಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದ ಸಚಿವರು, ರಕ್ತ ಸಂಗ್ರಹ ಮತ್ತು ಸರಬರಾಜಿಗಾಗಿ 4 ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಿರುವುದಾಗಿ ಪ್ರಕಟಿಸಿದರು.

# 20,980 ಟನ್‌ಗೂ ಅಧಿಕ ತ್ಯಾಜ್ಯ ತೆರವು: ರಮೇಶ್

ಬೆಂಗಳೂರು, ಅ.1: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ 'ತ್ಯಾಜ್ಯ ಮುಕ್ತ ಸ್ವಾತಂತ್ರ್ಯ ಅಭಿಯಾನ'ದಡಿ ಕಳೆದ ಎರಡು ತಿಂಗಳಲ್ಲಿ 20,980.84 ಮೆಟ್ರಿಕ್ ಟನ್‌ಗೂ ಅಧಿಕ ತ್ಯಾಜ್ಯವನ್ನು ತೆರವುಗೊಳಿಸಿ ವಿಲೇವಾರಿ ಮಾಡಲಾಗಿದೆ.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ ಆಗಸ್ಟ್ 1ರಿಂದ ಸೆಪ್ಟೆಂಬರ್ 30ರವರೆಗೆ ನಿರಂತರವಾಗಿ ವಿಶೇಷ ಸ್ವಚ್ಛತಾ ಕಾರ್ಯಾಚರಣೆ ನಡೆಸಲಾಗಿದೆ ಎಂದು ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದ್ದಾರೆ.

ಅಭಿಯಾನದ ವೇಳೆ ಪಾಲಿಕೆ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿದ್ದ ಕಸದ ರಾಶಿಗಳು ಹಾಗೂ ಬ್ಲ್ಯಾಕ್‌ಸ್ಪಾಟ್‌ಗಳನ್ನು ಟಿಪ್ಪರ್ ಲಾರಿಗಳ ಮೂಲಕ ತೆರವುಗೊಳಿಸಲಾಗಿದೆ. ಒಟ್ಟು 885 ಟ್ರಿಪ್‌ಗಳಲ್ಲಿ 20,980.84 ಮೆಟ್ರಿಕ್ ಟನ್ ತ್ಯಾಜ್ಯವನ್ನು ಸಾಗಿಸಲಾಗಿದ್ದು, ವಿಟ್ಟಸಂದ್ರ ಹಾಗೂ ಆನೇಕಲ್ ಬಳಿಯ ಕಲ್ಲುಬಾಳುವಿನಲ್ಲಿ ವಿಲೇವಾರಿ ಮಾಡಲಾಗಿದೆ.



**1,601 ಕೋರಿಕೆಗಳಿಗೆ ಸ್ಪಂದನೆ:**

ಸಾರ್ವಜನಿಕರು ಹಾಗೂ ಅಧಿಕಾರಿಗಳ ಸಹಯೋಗದಲ್ಲಿ ಕಸ ತೆರವುಗೊಳಿಸುವಂತೆ ಪೋರ್ಟಲ್‌ನಲ್ಲಿ ಒಟ್ಟು 1,601 ಕೋರಿಕೆಗಳು ದಾಖಲಾಗಿದ್ದವು. ಈ ಪೈಕಿ ಸಹಾಯಕ ಅಭಿಯಂತರರಿಂದ 928 ಹಾಗೂ ಮಾರ್ಷಲ್‌ಗಳಿಂದ 339 ಕೋರಿಕೆಗಳು ಸಲ್ಲಿಕೆಯಾಗಿದ್ದವು. ಕೋರಿಕೆಗಳಿಗೆ ತ್ವರಿತವಾಗಿ ಸ್ಪಂದಿಸಿದ ಸಿಬ್ಬಂದಿ ಸ್ಥಳದಲ್ಲಿದ್ದ ತ್ಯಾಜ್ಯವನ್ನು ತೆರವುಗೊಳಿಸಿ ವಿಲೇವಾರಿ ಮಾಡಿದ್ದಾರೆ.

**ಕಸಮುಕ್ತ ವಲಯಕ್ಕೆ ಆದ್ಯತೆ**

ನಗರದ ಪ್ರಮುಖ ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿದ್ದ ಕಸದ ರಾಶಿಗಳನ್ನು ಬಹುತೇಕ ತೆರವುಗೊಳಿಸಲಾಗಿದ್ದು, ಸ್ವಚ್ಛತೆ ಕಾಪಾಡುವ ಕಾರ್ಯ ಮುಂದುವರಿಯಲಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದ್ದಾರೆ.

ನಾಗರಿಕರು ಎಲ್ಲೆಂದರಲ್ಲಿ ಕಸ ಎಸೆಯದೆ, ಪಾಲಿಕೆಯ ಕಸ ಸಂಗ್ರಹ ವಾಹನಗಳಿಗೆ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕಿಸಿ ನೀಡಬೇಕು. ಸಾರ್ವಜನಿಕರ ಸಕ್ರಿಯ ಸಹಕಾರದಿಂದ ಮಾತ್ರ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯನ್ನು ನಿರಂತರವಾಗಿ ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯ ಎಂದು ಅವರು ಮನವಿ ಮಾಡಿದ್ದಾರೆ.

# ನಾಳೆ ಗಾಂಧಿ ಜಯಂತಿ: ಮಾಂಸ ಮಾರಾಟ ನಿಷೇಧ

ಬೆಂಗಳೂರು, ಅ.1–ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜಯಂತಿ ಅಂಗವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಉಃಂ) ವ್ಯಾಪ್ತಿಯಲ್ಲಿ ನಾಳೆ (ಅ.2ರಂದು) ಪ್ರಾಣಿವಧೆ ಹಾಗೂ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಅ.2ರಂದು ಶುಕ್ರವಾರ ಗಾಂಧಿ ಜಯಂತಿ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿರುವ ಕಸಾಯಿಖಾನೆಗಳಲ್ಲಿ ಯಾವುದೇ ರೀತಿಯ ಪ್ರಾಣಿವಧೆ ನಡೆಸುವಂತಿಲ್ಲ. ಜತೆಗೆ ಮಾಂಸದಂಗಡಿಗಳು ಹಾಗೂ ಇತರೆ ಮಳಿಗೆಗಳಲ್ಲಿ ಮಾಂಸ ಮಾರಾಟಕ್ಕೂ ನಿರ್ಬಂಧ ವಿಧಿಸಲಾಗಿದೆ.

ಈ ಕುರಿತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉಪ ನಿರ್ದೇಶಕರು (ಪಶುಪಾಲನೆ) ಮಾಹಿತಿ ನೀಡಿದ್ದು, ಗಾಂಧಿ ಜಯಂತಿ ಪ್ರಯುಕ್ತ ಪ್ರಾಣಿವಧೆ ಮತ್ತು ಮಾಂಸ ಮಾರಾಟಕ್ಕೆ ಒಂದು ದಿನದ ಮಟ್ಟಿಗೆ ಸಂಪೂರ್ಣ ನಿಷೇಧ ಜಾರಿಯಲ್ಲಿರಲಿದೆ ಎಂದು ತಿಳಿಸಿದ್ದಾರೆ.

ನಿಷೇಧದ ಅವಧಿಯಲ್ಲಿ ಕಸಾಯಿಖಾನೆಗಳು ಹಾಗೂ ಮಾಂಸದಂಗಡಿಗಳು ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ರೀತಿಯಲ್ಲಿ ಪ್ರಾಣಿವಧೆ ಅಥವಾ ಮಾಂಸ ಮಾರಾಟ ನಡೆಸದಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ.

ಗಾಂಧಿ ಜಯಂತಿ ಸೇರಿದಂತೆ ಸರ್ಕಾರ ನಿಗದಿಪಡಿಸಿರುವ ವಿಶೇಷ ದಿನಗಳಲ್ಲಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟಕ್ಕೆ ನಿರ್ಬಂಧ ವಿಧಿಸುವುದು ಸಾಮಾನ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಅ.2ರಂದು ಬೆಂಗಳೂರಿನಾದ್ಯಂತ ನಿಯಮ ಜಾರಿಯಾಗಲಿದೆ.

# ಎರಡು ದಿನ ಹಲವು ಜಿಲ್ಲೆಗಳಲ್ಲಿ ಮಳೆ ನಿರೀಕ್ಷೆ

ಬೆಂಗಳೂರು,ಅ.1–ಅರಬ್ಬಿ ಸಮುದ್ರದ ಕಡೆಯಿಂದ ಬೀಸುವ ಗಾಳಿಯ ಪ್ರಭಾವ ಕಡಿಮೆಯಾಗುತ್ತಿದ್ದು, ಪೂರ್ವದ ಮೋಡಗಳ ಚಲನೆಯಿಂದಾಗಿ ರಾಜ್ಯದ ವಾತಾವರಣದಲ್ಲಿ ದಿಢೀರ್ ಬದಲಾವಣೆಯಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಲಿದ್ದು, ಮುಂದಿನ ಎರಡು ದಿನಗಳ ಕಾಲ ವಿವಿಧ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 1 ರಂದು ಕರಾವಳಿ, ಮಲೆನಾಡು ಹಾಗೂ ದಕ್ಷಿಣ ಒಳನಾಡಿನ ಒಟ್ಟು 12 ಜಿಲ್ಲೆಗಳಿಗೆ ಹವಾಮಾನ ಇಲಾಖೆಯು 'ಯೆಲ್ಲೋ ಅಲರ್ಟ್' (ಹಳದಿ ಎಚ್ಚರಿಕೆ) ಘೋಷಿಸಿದೆ.

**ಕರಾವಳಿ ಮತ್ತು ಮಲೆನಾಡು:** ದಕ್ಷಿಣ ಕನ್ನಡ, ಉಡುಪಿ, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಂಜೆ ಹಾಗೂ ರಾತ್ರಿ ವೇಳೆ ಗುಡುಗು, ಮಿಂಚು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಲಿದೆ.



**ದಕ್ಷಿಣ ಒಳನಾಡು:** ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ದಾವಣಗೆರೆ, ಕೊಡಗು ಮತ್ತು ತುಮಕೂರು ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಗುಡುಗು ಸಹಿತ ಮಳೆ ಮುಂದುವರಿಯಲಿದೆ.

**ಸಾಧಾರಣ ಮಳೆ:** ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ಕೋಲಾರ, ಮಂಡ್ಯ, ಮೈಸೂರು, ರಾಮನಗರ ಮತ್ತು ವಿಜಯನಗರ ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ ಮಧ್ಯಾಹ್ನ ಅಥವಾ ಸಂಜೆಯ ನಂತರ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ.

**ಬೆಂಗಳೂರಲ್ಲಿ ಮೋಡಕವಿದ ವಾತಾವರಣ**

ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಭಾಗಶಃ ಮೋಡಕವಿದ ವಾತಾವರಣವಿರಲಿದೆ. ನಗರದ ಕೆಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದ್ದರೆ, ಇನ್ನು ಕೆಲವೆಡೆ ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವುದರೊಂದಿಗೆ ಸಾಧಾರಣ ಮಳೆಯಾಗಬಹುದು.

**ಉತ್ತರ ಒಳನಾಡಿನಲ್ಲಿ ಒಣ ಹವೆ**

ದಕ್ಷಿಣ ಒಳನಾಡಿನಲ್ಲಿ ಮುಂಗಾರು ಚುರುಕಾಗಿದ್ದರೂ, ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಒಣ ಹವಾಮಾನ ಮುಂದುವರಿಯಲಿದ್ದು, ಮುಂಬರುವ ದಿನಗಳಲ್ಲಿ ಅಲ್ಲಿ ಮಳೆಯ ಪ್ರಮಾಣ ಮತ್ತಷ್ಟು ಕಡಿಮೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

# ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ದಂಡ ಹೆಚ್ಚಳಕ್ಕೆ ಚಿಂತನೆ

ಬೆಂಗಳೂರು,ಅ.1–ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಿಸುವ ನಿಟ್ಟಿನಲ್ಲಿ ಸಂಚಾರ ನಿಯಮ ಉಲ್ಲಂಘನೆಗಳಿಗೆ ವಿಧಿಸಲಾಗುತ್ತಿರುವ ದಂಡದ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸಿದೆ.

ಈ ಸಂಬಂಧ ಸಾರಿಗೆ ಇಲಾಖೆ ಹಾಗೂ ಗೃಹ ಇಲಾಖೆ ನಡುವೆ ಚರ್ಚೆ ನಡೆದಿದ್ದು, ನಿನ್ನೆ ಸಚಿವ ಭೈರತಿ ಸುರೇಶ್ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ನಡೆದ ಜಂಟಿ ಸಭೆಯಲ್ಲಿ ಸಂಚಾರ ನಿಯಮ ಉಲ್ಲಂಘನೆಗಳಿಗೆ ಹೆಚ್ಚಿನ ದಂಡ ವಿಧಿಸುವ ಪ್ರಸ್ತಾವನೆ ಕುರಿತು ಚರ್ಚಿಸಲಾಗಿದೆ.

ನಗರದ ಸಂಚಾರ ದಟ್ಟಣೆ ಸಮಸ್ಯೆಗೆ ಸಂಚಾರ ನಿಯಮಗಳ ಉಲ್ಲಂಘನೆಯೂ ಪ್ರಮುಖ ಕಾರಣವಾಗಿರುವ ಹಿನ್ನೆಲೆಯಲ್ಲಿ ದಂಡದ ಮೊತ್ತ ಹೆಚ್ಚಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ.

**ಉಲ್ಲಂಘನೆಗಳಿಗೆ ದಂಡ ಹೆಚ್ಚಳ:** ಫುಟ್‌ಪಾತ್‌ನಲ್ಲಿ ವಾಹನ ನಿಲುಗಡೆ, ಒನ್‌ವೇ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಾಲನೆ, ಫುಟ್‌ಪಾತ್ ಮೇಲೆ ವಾಹನ ಚಲಾಯಿಸುವುದು, ಅನಧಿಕೃತ ಪಾರ್ಕಿಂಗ್, ನೋ ಪಾರ್ಕಿಂಗ್ ಉಲ್ಲಂಘನೆ, ಸಿಗ್ನಲ್ ಜಂಪ್ ಹಾಗೂ ಸುಗಮ ಸಂಚಾರಕ್ಕೆ ಅಡ್ಡಿಪಡಿಸುವುದು ಸೇರಿದಂತೆ ಹಲವು ಸಂಚಾರ ನಿಯಮ ಉಲ್ಲಂಘನೆಗಳಿಗೆ ದಂಡ ಹೆಚ್ಚಿಸುವ ಪ್ರಸ್ತಾವನೆ ಚರ್ಚೆಯಲ್ಲಿದೆ.

ಆದರೆ, ಸಂಚಾರ ನಿಯಮ ಉಲ್ಲಂಘನೆಗಳಿಗೆ ಹೆಚ್ಚಿನ ದಂಡ ವಿಧಿಸುವ ಪ್ರಸ್ತಾವನೆ ಕುರಿತು ಚರ್ಚೆ ನಡೆದಿದ್ದರೂ, ಇದನ್ನು ಯಾವಾಗಿನಿಂದ ಜಾರಿಗೆ ತರಬೇಕು ಹಾಗೂ ಅಂತಿಮವಾಗಿ ಎಷ್ಟು ದಂಡ ವಿಧಿಸಬೇಕು ಎಂಬ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಕೈಗೊಳ್ಳಲಾಗಿಲ್ಲ.

**ಪ್ರಸ್ತಾವಿತ ದಂಡದ ವಿವರ**

ಫುಟ್‌ಪಾತ್ ಪಾರ್ಕಿಂಗ್
ಪ್ರಸ್ತುತ ಮೊದಲ ಉಲ್ಲಂಘನೆಗೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಒನ್‌ವೇ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಾಲನೆ
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಫುಟ್‌ಪಾತ್ ಮೇಲೆ ಚಾಲನೆ
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಅನಧಿಕೃತ ಪಾರ್ಕಿಂಗ್
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ನೋ ಪಾರ್ಕಿಂಗ್ ಉಲ್ಲಂಘನೆ
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಸಿಗ್ನಲ್ ಜಂಪ್
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಟ್ರಾಫಿಕ್ ಮುಕ್ತ ಸಂಚಾರಕ್ಕೆ ಅಡ್ಡಿ
ಪ್ರಸ್ತುತ ಮೊದಲ ಉಲ್ಲಂಘನೆ: 500
ಮರುಕಳಿಸಿದರೆ: 1,000
ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ: 3,000
ಮರುಕಳಿಸಿದರೆ: 5,000

ಅಪಾಯಕಾರಿ ಚಾಲನೆಗೂ ದಂಡ ಹೆಚ್ಚಳ ಪ್ರಸ್ತಾವನೆ
ದ್ವಿಚಕ್ರ ವಾಹನ
ಪ್ರಸ್ತುತ ಮೊದಲ ತಪ್ಪಿಗೆ: 1,500
ಪ್ರಸ್ತಾವಿತ ದಂಡ: 3,000
ಲಘು ಮೋಟಾರು ವಾಹನ
ಪ್ರಸ್ತುತ ಮೊದಲ ತಪ್ಪಿಗೆ: 3,000
ಪ್ರಸ್ತಾವಿತ ದಂಡ: 5,000
ಇತರ / ಭಾರೀ ವಾಹನಗಳು
ಪ್ರಸ್ತುತ ಮೊದಲ ತಪ್ಪಿಗೆ: 5,000
ಪ್ರಸ್ತಾವಿತ ದಂಡ: 10,000



ಮಾಜಿ ಸಂಸದರು, ಮಾಜಿ ಸಚಿವ ಬಿ.ಎನ್. ಬಚ್ಚೇಗೌಡರು ಇಂದು ಹುಟ್ಟುಹಬ್ಬ ಆಚರಿಸಿಕೊಂಡ ಸಂದರ್ಭದಲ್ಲಿ ಹಲವಾರು ಮುಖಂಡರು ಅವರ ನಿವಾಸಕ್ಕೆ ಭೇಟಿ ನೀಡಿ ಪುಷ್ಪಗುಚ್ಛ ನೀಡಿ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಶಾಸಕ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ದಂಪತಿ ಇದ್ದಾರೆ.

# ತಾವರೆಕೆರೆ ಉದ್ಯಾನವನದ ಬಳಿ 1 ಎಂಎಲ್‌ಡಿ ಎಸ್‌ಟಿಪಿ ಸ್ಥಾಪನೆ

ಬೆಂಗಳೂರು, ಅ. 1– ಸ್ಥಳೀಯ ನಿವಾಸಿಗಳು, ನಡಿಗೆದಾರರು ಹಾಗೂ ಉದ್ಯಾನವನ ಬಳಕೆದಾರರ ನಿರಂತರ ಮನವಿಗೆ ಸ್ಪಂದಿಸಿರುವ ಬೆಂಗಳೂರು ಜಲಮಂಡಳಿ, ತಾವರೆಕೆರೆ ಉದ್ಯಾನವನದ ಸಮೀಪ 1 ಎಂಎಲ್‌ಡಿ ಸಾಮರ್ಥ್ಯದ ವಿಕೇಂದ್ರೀಕೃತ ಒಳಚರಂಡಿ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸ್ಥಾಪಿಸಲು ಮುಂದಾಗಿದೆ.

ತಾವರೆಕೆರೆ ಉದ್ಯಾನವನದ ಸಮೀಪದ ಮಳೆನೀರು ಕಾಲುವೆಯಲ್ಲಿ ಗಣನೀಯ ಪ್ರಮಾಣದ ಒಳಚರಂಡಿ ನೀರು ಹರಿಯುತ್ತಿರುವುದರಿಂದ ದುರ್ವಾಸನೆ, ನೊಣಗಳ ಕಾಟ ಹಾಗೂ ಅನೈರ್ಮಲ್ಯ ಉಂಟಾಗುತ್ತಿದೆ ಎಂದು ಸ್ಥಳೀಯರು ಹಲವು ಬಾರಿ ಜಲಮಂಡಳಿಗೆ ಮನವಿ ಸಲ್ಲಿಸಿದ್ದರು. ಸಮಸ್ಯೆಗೆ ದೀರ್ಘಕಾಲೀನ ಪರಿಹಾರ ಕಲ್ಪಿಸುವ ಉದ್ದೇಶದಿಂದ ಇದೀಗ ಎಸ್‌ಟಿಪಿ ಯೋಜನೆ ರೂಪಿಸಲಾಗಿದೆ.

**ಯೋಜನೆಯಿಂದ ನಿರೀಕ್ಷಿತ ಪ್ರಯೋಜನಗಳು**
- ಕಾಲುವೆಗೆ ಸೇರುವ ಒಳಚರಂಡಿ ನೀರಿಗೆ ಕಡಿವಾಣ
- ದುರ್ವಾಸನೆ ಮತ್ತು ನೊಣಗಳ ಕಾಟ ನಿಯಂತ್ರಣ
- ಉದ್ಯಾನವನದ ನೈರ್ಮಲ್ಯ ಹಾಗೂ ಪರಿಸರ ಗುಣಮಟ್ಟ ಸುಧಾರಣೆ
- ತೋಟಗಾರಿಕೆಗೆ ಕುಡಿಯುವ ನೀರಿನ ಬಳಕೆ ಕಡಿತ
- ಸಂಸ್ಕರಿಸಿದ ನೀರಿನ ಮರುಬಳಕೆ
- ಜಲಮೂಲಗಳಿಗೆ ಸೇರುವ ತ್ಯಾಜ್ಯನೀರಿನ ಪ್ರಮಾಣ ಇಳಿಕೆ.

**ಕಾಲುವೆಯ ತ್ಯಾಜ್ಯನೀರಿಗೆ ಕಡಿವಾಣ**

ಯೋಜನೆಯಡಿ ಕಾಲುವೆಯಲ್ಲಿ ಹರಿಯುತ್ತಿರುವ ಒಳಚರಂಡಿ ನೀರನ್ನು ತಡೆದು 1 ಎಂಎಲ್‌ಡಿ ಎಸ್‌ಟಿಪಿಯಲ್ಲಿ ಸಂಸ್ಕರಿಸಲಾಗುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ನಿಗದಿಪಡಿಸಿರುವ ಗುಣಮಟ್ಟಕ್ಕೆ ಅನುಗುಣವಾಗಿ ನೀರನ್ನು ಸಂಸ್ಕರಿಸಿ, ತ್ಯಾಜ್ಯನೀರು ಕಾಲುವೆಗೆ ಸೇರುವ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶ ಹೊಂದಲಾಗಿದೆ.

ಇದರಿಂದ ಉದ್ಯಾನವನ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ದುರ್ವಾಸನೆ, ನೊಣಗಳ ಕಾಟ ಮತ್ತು ಅನೈರ್ಮಲ್ಯ ಕಡಿಮೆಯಾಗುವ ನಿರೀಕ್ಷೆಯಿದೆ. ಅಲ್ಲದೆ, ಪರಿಸರದ ಗುಣಮಟ್ಟ ಸುಧಾರಣೆಯಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

**ಕುಡಿಯುವ ನೀರಿನ ಉಳಿತಾಯ:**

ತಾವರೆಕೆರೆ ಉದ್ಯಾನವನದ ಹಸಿರು ಪ್ರದೇಶ ಮತ್ತು ಗಿಡಗಳ ನಿರ್ವಹಣೆಗೆ ಪ್ರಸ್ತುತ ಕುಡಿಯುವ ನೀರನ್ನು ಬಳಸಲಾಗುತ್ತಿದೆ. ಎಸ್‌ಟಿಪಿಯಿಂದ ಲಭ್ಯವಾಗುವ ಸಂಸ್ಕರಿಸಿದ ನೀರನ್ನು ತೋಟಗಾರಿಕೆ ಹಾಗೂ ಹಸಿರು ಪ್ರದೇಶಗಳ ನಿರ್ವಹಣೆಗೆ ಬಳಸುವ ಮೂಲಕ ಕುಡಿಯುವ ನೀರಿನ ಬಳಕೆಯನ್ನು ಕಡಿಮೆ ಮಾಡಲು ಯೋಜಿಸಲಾಗಿದೆ.

ಹೆಚ್ಚುವರಿ ಸಂಸ್ಕರಿಸಿದ ನೀರನ್ನು ನಿರ್ಮಾಣ ಕಾಮಗಾರಿ, ರಸ್ತೆ ಮತ್ತು ಆವರಣಗಳ ಸ್ವಚ್ಛತೆ ಸೇರಿದಂತೆ ವಿವಿಧ ಕುಡಿಯೇತರ ಅಗತ್ಯಗಳಿಗೆ ಮರುಬಳಕೆ ಮಾಡಲು ಉದ್ದೇಶಿಸಲಾಗಿದೆ.

ಪರಿಸರ ಪುನರುಜ್ಜೀವನಕ್ಕೆ ಒತ್ತು ಯೋಜನೆ ಜಾರಿಯಾದರೆ ತಾವರೆಕೆರೆ ಉದ್ಯಾನವನದ ಸುತ್ತಮುತ್ತಲಿನ ಪ್ರದೇಶದಲ್ಲಿ ತ್ಯಾಜ್ಯನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸುವುದರ ಜತೆಗೆ ಜಲಸಂರಕ್ಷಣೆ ಮತ್ತು ಸಂಸ್ಕರಿಸಿದ ನೀರಿನ ಮರುಬಳಕೆಗೆ ಉತ್ತೇಜನ ದೊರೆಯಲಿದೆ. ಕಾಲುವೆಗಳು ಹಾಗೂ ಜಲಮೂಲಗಳಿಗೆ ಸೇರುವ ತ್ಯಾಜ್ಯನೀರಿನ ಪ್ರಮಾಣವೂ ಕಡಿಮೆಯಾಗಲಿದೆ.

**ಟೆಂಡರ್ ಮೌಲ್ಯಮಾಪನ ಹಂತದಲ್ಲಿ**

1 ಎಂಎಲ್‌ಡಿ ಎಸ್‌ಟಿಪಿ ಯೋಜನೆಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಸದ್ಯ ಪರಿಶೀಲನೆ ಮತ್ತು ಮೌಲ್ಯಮಾಪನ ಹಂತದಲ್ಲಿದೆ. ಜಾರಿಯಲ್ಲಿರುವ ನಿಯಮಗಳು ಹಾಗೂ ಟೆಂಡರ್ ಷರತ್ತುಗಳಿಗೆ ಅನುಗುಣವಾಗಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದು ಜಲಮಂಡಳಿ ತಿಳಿಸಿದೆ.



ಇಂದು ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಸಂಸದರು ಹಾಗೂ ಮಾಜಿ ಸಚಿವರಾದ ಬಿ.ಎನ್. ಬಚ್ಚೇಗೌಡ ಅವರಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ ಮಾಜಿ ಸದಸ್ಯರಾದ (ಬಿದರಹಳ್ಳಿ) ಶೋಭಾ ಜಿ. ರಮೇಶ್, ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ದೊಡ್ಡಗುಬ್ಬಿ ರಮೇಶ್‌ರವರು ಪುಷ್ಪಗುಚ್ಛ ನೀಡಿ ಶುಭಾಶಯ ಕೋರಿದರು.

## ಪಾರ್ಕ್ ನಿರ್ಮಾಣ ಜಾಗ ಅನ್ಯ ಉದ್ದೇಶಕ್ಕೆ ಬಳಸಲ್ಲ:ರಾ.ರೆಡ್ಡಿ





ಬೆಂಗಳೂರು, ಅ. 1– ಜಿಗಣಿ ಸಮೀಪದ ಹೆನ್ನಾಗರ ಸರ್ವೆ ನಂ.5ರ 52 ಎಕರೆಯು ಬಟಾನಿಕಲ್ ಪಾರ್ಕ್ ನಿರ್ಮಾಣದ ಜಾಗವಾಗಿದೆ. ಭೂಮಿಯನ್ನು ಅನ್ಯ ಉದ್ದೇಶಕ್ಕೆ ಬಳಸಲು ಬಿಡುವುದಿಲ್ಲ. ಈ ಸಂಬಂಧ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಅರಣ್ಯ ಇಲಾಖೆ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲು ಬಿಡುವುದಿಲ್ಲ' ಎಂದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ 18 ಕಿ.ಮೀ. ಒಳಗೆ ಇರುವುದರಿಂದ ಬಗರ್‌ಹುಕುಂ ಸಾಗುವಳಿಯಡಿಯಲ್ಲಿ ಭೂಮಿ ಪಡೆಯಲು ಹಕ್ಕು ಇರುವುದಿಲ್ಲ ಎಂದು ಸರ್ಕಾರ ತಿಳಿಸಿದೆ. ಹೈಕೋರ್ಟ್ ಸಹ ಅರಣ್ಯ ಇಲಾಖೆಯ ಭೂಮಿಯ ಒತ್ತುವರಿ ತೆರವು ಮಾಡುವಂತೆ ಸೂಚಿಸಿದೆ. ಈ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಬಟಾನಿಕಲ್ ಪಾರ್ಕ್ ನಿರ್ಮಾಣಕ್ಕೆ ಮೀಸಲಿಟ್ಟ ಜಾಗಕ್ಕೆ ಇದೇ ವಾರದಲ್ಲಿ ನೀಡಿ ಪರಿಶೀಲಿಸಲಾಗುವುದು ಎಂದು ತಿಳಿಸಿದ ಸಚಿವ ಅರಣ್ಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ ಎಂದು ಹೇಳಿದರು.

ಅರಣ್ಯ ಇಲಾಖೆಯಿಂದ ಬೆಂಗಳೂರಿನ ಹತ್ತು ಕಡೆ ಟೀ ಪಾರ್ಕ್ ಹಾಗೂ ಜಾಗ ಇರುವ ಕಡೆಗಳಲ್ಲಿ ಟ್ರಕಿಂ–ಗ್‌ಗೂ ಅನುಕೂಲವಾಗುವಂತೆ ಅರಣ್ಯ ಇಲಾಖೆಯಿಂದ ವ್ಯವಸ್ಥೆ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

'ಪಣತ್ತೂರಿನಲ್ಲಿ ಟೀಪಾರ್ಕ್ ಸ್ಥಾಪನೆಯಾಗಿದೆ. ಬೆಂಗಳೂರಿನ ಲಾಲ್‌ಬಾಗ್ 240, ಕಬ್ಬನ್ ಪಾರ್ಕ್ 10, 1.4ಕೋಟಿ ಜನಸಂಖ್ಯೆಯಿದ್ದು ಜನಸಂಖ್ಯೆಗೆ ಅನುಗುಣವಾಗಿ ಅವಶ್ಯಕತೆಯಿರುವೆಡೆ ಉದ್ಯಾನ ನಿರ್ಮಿಸಲಾಗುವುದು' ಎಂದರು. ಕಲ್ಕೆರೆಯಲ್ಲಿ 100 ಎಕರೆ, ಗುಂಜೂರು ಬಳಿ 150ಎಕರೆ, ಬೆಂಗಳೂರು ಉತ್ತರ ಮತ್ತು ತೂರಹಳ್ಳಿ ಬಳಿ ಇರುವ ಅರಣ್ಯ ಇಲಾಖೆ ಜಾಗದಲ್ಲಿ ಉದ್ಯಾನ ನಿರ್ಮಿಸಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಆನೇಕಲ್ ಶಾಸಕ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಬಿ. ಶಿವಣ್ಣ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಸಚಿವ ರಾಮಲಿಂಗಾರೆಡ್ಡಿರವರು ಆನೇಕಲ್ ತಾಲ್ಲೂಕಿನ ಚಂದಾಪುರ, ರಾಮಕೃಷ್ಣಪುರ, ಹೆನ್ನಾಗರ ಹೀಲಗಿಗೆ ಮತ್ತಾನಲ್ಲೂರು ಕೆರೆಗಳಿಗೆ ಭೇಟಿ ನೀಡಿ ಅಲ್ಲಿನ ಮಾಲಿನ್ಯ ಪರಿಸ್ಥಿತಿಯನ್ನು ಅವಲೋಕಿಸಿದರು.

## ಡೈನೋಸಾರ್‌ಗಿಂತಲೂ ಪುರಾತನ ಅಪರೂಪದ ಜೀವಿಯ ಪಳೆಯುಳಿಕೆ ಪತ್ತೆ



ಶಿಕಾಗೋ,ಅ.1– ವಿಜ್ಞಾನಿಗಳು ಮತ್ತು ಪಾಲಿಯಂಟಾಲಜಿಸ್ಟ್‌ಗಳು (ಪಳೆಯುಳಿಕೆಶಾಸ್ತ್ರಜ್ಞರು) ಭೂಮಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಅತ್ಯಂತ ಅಪರೂಪದ ಹಾಗೂ ಮಹತ್ವದ ಸಂಶೋಧನೆಯೊಂದನ್ನು ನಡೆಸಿದ್ದಾರೆ. ಅಮೆರಿಕದ ಶಿಕಾಗೋದ ಫೀಲ್ಡ್ ಮ್ಯೂಸಿಯಂನಲ್ಲಿ ಸಂಶೋಧನೆ ನಡೆಸುತ್ತಿದ್ದ ಇಬ್ಬರು ವಿದ್ಯಾರ್ಥಿ ಸಂಶೋಧಕರು ಸುಮಾರು 30.9 ಕೋಟಿ (309 ಮಿಲಿಯನ್) ವರ್ಷಗಳಿಗಿಂತಲೂ ಹಳೆಯದಾದ ಅತ್ಯಂತ ಅಪರೂಪದ ಜೀವಿಯ ಪಳೆಯುಳಿಕೆಯನ್ನು ಪತ್ತೆಹಚ್ಚಿದ್ದಾರೆ.

ಈ ಜೀವಿಯು ಭೂಮಿಯ ಮೇಲೆ ಡೈನೋಸಾರ್‌ಗಳು ಕಾಣಿಸಿಕೊಳ್ಳುವುದಕ್ಕಿಂತಲೂ ಲಕ್ಷಾಂತರ ವರ್ಷಗಳ ಮುಂಚೆಯೇ ಜೀವಿಸಿತ್ತು ಎಂಬ ಅಂಶವನ್ನು ಸಂಶೋಧಕರು ದೃಢಪಡಿಸಿದ್ದಾರೆ.

ಪತ್ತೆಯಾದ ಸ್ಥಳ: ಪ್ರಸ್ತುತ ಶಿಕಾಗೋ ನಗರವಿರುವ ಪ್ರದೇಶವು ಕಾರ್ಬೊನಿಫೆರಸ್ ಯುಗದಲ್ಲಿ ಅಂ–ದರೆ ಸುಮಾರು 30.9 ಕೋಟಿ ವರ್ಷಗಳ ಹಿಂದೆ ಜೌಗು ನದಿಯ ಮುಖಜ ಭೂಮಿಯಾಗಿತ್ತು .ಈ ಪ್ರದೇಶದ ಹಳೆಯ ಶೇಖರಣೆಗಳಲ್ಲಿ ಈ ಜೀವಿಯ ಪಳೆಯುಳಿಕೆ ಸಿಕ್ಕಿದೆ.

ವಿದ್ಯಾರ್ಥಿಗಳಿಂದ ಪತ್ತೆ: ಫೀಲ್ಡ್ ಮ್ಯೂಸಿಯಂನಲ್ಲಿ ಇಂಟರ್ನ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಪೇಟನ್ ಕೋಹ್ಲ್‌ಬರ್ಗ್ ಮತ್ತು ಎಲಿಸನ್ ಸೆಫ್ಕೋವಿಚ್ ಎಂಬ ಇಬ್ಬರು ವಿದ್ಯಾರ್ಥಿ ಸಂಶೋಧಕರು ಈ ಪಳೆಯುಳಿಕೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಇದು ಹೊಸ ಮಾದರಿಯ ಪ್ರಾಚೀನ ಜೀವಿ ಎಂದು ಗುರುತಿಸಿದ್ದಾರೆ.

ತಾಯಂದಿರ ಗೌರವಾರ್ಥ ನಾಮಕರಣ: ಈ ಐತಿಹಾಸಿಕ ಸಂಶೋಧನೆಯ ನೆನಪಿಗಾಗಿ ಹಾಗೂ ತಮ್ಮ ಬೆಳವಣಿಗೆಗೆ ಕಾರಣರಾದ ತಾಯಂದಿರಿಗೆ ಗೌರವ ಸಲ್ಲಿಸುವ ಸಲುವಾಗಿ ಸಂಶೋಧಕರು ಈ ಹೊಸ ಜೀವಿಗೆ ತಮ್ಮ ತಾಯಂದಿರ ಹೆಸರನ್ನೇ ಇಟ್ಟಿದ್ದಾರೆ.

ವಿಜ್ಞಾನಿಗಳ ಪ್ರಕಾರ, ಡೈನೋಸಾರ್‌ಗಳ ಯುಗಕ್ಕಿಂತ ಮುಂಚಿನ ಜೀವಿಗಳ ಪಳೆಯುಳಿಕೆಗಳು ಲಭ್ಯವಾಗುವುದು ಅತ್ಯಂತ ವಿರಳ. ಇಂತಹ ಸಂಶೋಧನೆಗಳು ಭೂಮಿಯ ಮೇಲೆ ಆ ಕಾಲದಲ್ಲಿದ್ದ ಪರಿಸರ ವ್ಯವಸ್ಥೆ, ಜೀವಿಗಳ ವಿಕಾಸದ ಹಂತಗಳು ಹಾಗೂ ಪ್ರಾಚೀನ ಸಾಗರ ಮತ್ತು ಜೌಗು ಪ್ರದೇಶಗಳ ಸಸ್ಯ–ಪ್ರಾಣಿ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳಲು ಜಾಗತಿಕ ವಿಜ್ಞಾನಿಗಳಿಗೆ ಹೊಸ ದಾರಿದೀಪವಾಗಲಿವೆ.

ಕಲ್ಲಿನಲ್ಲಿ ಜೀವಂತ ನೆರಳು: ಇಲಿನಾಯ್ಸ್‌ನ ಮೇಸನ್ ಕ್ರೀಕ್ ಪ್ರದೇಶದಲ್ಲಿ ದೊರೆತ ಈ ಕಬ್ಬಿಣದ ಅದಿರಿನ ಕಲ್ಲಿನ ಒಳಗೆ ಜೀವಿಯ ಅಸ್ಥಿಪಂಜರ ಹಾಗೂ ಶರೀರದ ಮೃದು ಅಂಗಾಂಶಗಳ ಗುರುತುಗಳು ಅತ್ಯಂತ ಸ್ಪಷ್ಟವಾಗಿ ಮುದ್ರಿತವಾಗಿವೆ.

## 300 ನಾಯಿ-ಬೆಕ್ಕುಗಳಿಗೆ ರೇಬಿಸ್ ಲಸಿಕೆ

ಬೆಂಗಳೂರು.ಅ1: ವಿಶ್ವ ರೇಬಿಸ್ ದಿನದ ಅಂಗವಾಗಿ ಸುಪರ್ಟೇಲ್ಸ್ ಆಯೋಜಿಸಿದ್ದ ಮೂರು ದಿನಗಳ "ನೋ ರೇಬಿಸ್ ಫಾರ್ ನಮ್ಮ ಬೇಬೀಸ್" ಅಭಿಯಾನದಲ್ಲಿ ಬೆಂಗಳೂರಿನ 12 ಕ್ಲಿನಿಕ್‌ಗಳಲ್ಲಿ 300 ನಾಯಿ–ಬೆಕ್ಕುಗಳಿಗೆ ರೇಬಿಸ್ ಲಸಿಕೆ ನೀಡಲಾಯಿತು.

ಸೆ.28ರಿಂದ 30ರವರೆಗೆ ನಡೆದ ಅಭಿಯಾನದಲ್ಲಿ ಸಾಕುಪ್ರಾಣಿಗಳು ಹಾಗೂ ಬೀದಿ ಪ್ರಾಣಿಗಳಿಗೆ ತಲಾ ?49 ದರದಲ್ಲಿ ಲಸಿಕೆ ಹಾಕಲಾಯಿತು. ಫೀಡರ್‌ಗಳು, ರೆಸ್ಕ್ಯೂ ಕಾರ್ಯಕರ್ತರು, ಆರ್‌ಡಬ್ಲ್ಯೂಎಗಳು ಹಾಗೂ ಎನ್‌ಜಿಓಗಳು ಸಮುದಾಯದ ಪ್ರಾಣಿಗಳನ್ನು ಕರೆತಂದರು.

ಲಸಿಕೆಗೂ ಮುನ್ನ ಪಶುವೈದ್ಯರಿಂದ ಆರೋಗ್ಯ ತಪಾಸಣೆ ನಡೆಸಿ, ಬಳಿಕ 15 ನಿಮಿಷಗಳ ಕಾಲ ವೀಕ್ಷಿಸಲಾಯಿತು. ಪ್ರಾಣಿಗಳಿಗೆ ನೋಬಿವ್ಯಾಕ್ ಆಂಟಿ–ರೇಬಿಸ್ ಲಸಿಕೆ ನೀಡಿ, ಲಸಿಕೆ ವಿವರಗಳಿರುವ ಪುಸ್ತಕ ಹಾಗೂ ಉಚಿತ ಪ್ರತಿಫಲಿತ ಕಾಲರ್ ವಿತರಿಸಲಾಯಿತು.

ರೇಬಿಸ್ ಮಾರಣಾಂತಿಕವಾಗಿದ್ದರೂ ಸಮಯಕ್ಕೆ ಸರಿಯಾಗಿ ಲಸಿಕೆ ನೀಡುವ ಮೂಲಕ ತಡೆಗಟ್ಟಬಹುದು. ಸಮುದಾಯದ ಪ್ರಾಣಿಗಳಿಗೆ ಲಸಿಕೆ ನೀಡುವಲ್ಲಿ ವೆಚ್ಚ ಮತ್ತು ಲಭ್ಯತೆ ಪ್ರಮುಖ ಸವಾಲುಗಳಾಗಿವೆ ಎಂದು ಸುಪರ್ಟೇಲ್ಸ್ ಸಹ–ಸಂಸ್ಥಾಪಕ ವಿನೀತ್ ಖನ್ನಾ ಹೇಳಿದರು. ಭಾರತವು 2030ರ ವೇಳೆಗೆ ನಾಯಿಗಳಿಂದ ಹರಡುವ ಮಾನವ ರೇಬಿಸ್ ಸಾವುಗಳನ್ನು ನಿರ್ಮೂಲನೆ ಮಾಡುವ ಗುರಿ ಹೊಂದಿದೆ.

## ದೇಶದಲ್ಲಿ ಶೇ. 51ರಷ್ಟು ಭಾಗದಲ್ಲಿ ಬರ



ನವದೆಹಲಿ,ಅ.1–ಪ್ರಸಕ್ತ ವರ್ಷದ ಮುಂಗಾರು ಮಳೆಯು ದೇಶದಿಂದ ನಿರ್ಗಮಿಸುವ ಹಂತ ತಲುಪಿದ್ದು, ಈ ಬಾರಿಯ ಮಳೆ ಹಂಚಿಕೆಯಲ್ಲಿ ಎದ್ದು ಕಾಣುವ ವೈಪರೀತ್ಯವು ದೇಶದ ಬಹುತೇಕ ಭಾಗವನ್ನು ತೀವ್ರ ಆತಂಕಕ್ಕೆ ತಳ್ಳಿದೆ. ದೇಶದ ಶೇಕಡಾ 51ರಷ್ಟು ಪ್ರದೇಶಗಳು ತೀವ್ರ ಬಾರಿಯ ಬರ ಅಥವಾ ಮಳೆ ಕೊರತೆಯನ್ನು ಎದುರಿಸುತ್ತಿದ್ದು, ಕೆಲವು ರಾಜ್ಯಗಳಲ್ಲಿ ಕಳೆದ 17 ವರ್ಷಗಳಲ್ಲೇ ಅತ್ಯಂತ ಕಡಿಮೆ ಮಳೆಯಾಗಿದ್ದರೆ, ಇನ್ನು ಕೆಲವು ಪ್ರದೇಶಗಳಲ್ಲಿ ಬರೋಬ್ಬರಿ 20 ವರ್ಷಗಳ ದಾಖಲೆಯನ್ನು ಮುರಿಯುವಂತಹ ಅತಿಯಾದ ಮಳೆಯಾಗಿದೆ. ಶಾಂತಸಾಗರದಲ್ಲಿ ಬಲಗೊಳ್ಳುತ್ತಿರುವ 'ಎಲ್ ನಿನೋ' ವಿದ್ಯಮಾನದ ಕಾರಣದಿಂದಾಗಿ ದೇಶಾದ್ಯಂತ ಸರಾಸರಿ ಮಳೆಯಲ್ಲಿ ಸುಮಾರು ಶೇಕಡಾ 15 ರಷ್ಟು ಭಾರಿ ಕೊರತೆ ಉಂಟಾಗಿದ್ದು, ಬಿಹಾರ, ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳ 47 ಪ್ರತಿಶತಕ್ಕಿಂತಲೂ ಹೆಚ್ಚು ಜಿಲ್ಲೆಗಳು ತೀವ್ರ ಒಣಹವೆಯಿಂದ ಕಂಗೆಟ್ಟಿವೆ. ಈ ಅಸಮತೋಲಿತ ಮುಂಗಾರಿನ ಪರಿಣಾಮವಾಗಿ ದೇಶದ ಪ್ರಮುಖ 178 ಜಲಾಶಯಗಳಲ್ಲಿನ ನೀರಿನ ಸಂಗ್ರಹಣೆಯು ಕಳೆದ ವರ್ಷಕ್ಕಿಂತ ಶೇಕಡಾ 21 ರಷ್ಟು ಕುಸಿದಿದ್ದು, ಇದು ಮುಂಬರುವ ದಿನಗಳಲ್ಲಿ ಭಾರಿ ಕುಡಿಯುವ ನೀರಿನ ಅಭಾವಕ್ಕೆ ಕಾರಣವಾಗುವ ಲಕ್ಷಣಗಳಿವೆ. ನೀರಿನ ಕೊರತೆ ಮತ್ತು ಮಣ್ಣಿನಲ್ಲಿ ತೇವಾಂಶ ಕಡಿಮೆಯಾಗಿರುವುದರಿಂದ ಮುಂಗಾರು ಬೆಳೆಗಳಾದ ಭತ್ತ, ಕಬ್ಬು ಮತ್ತು ಜೋಳದ ಇಳುವರಿಯಲ್ಲಿ ಭಾರಿ ಪ್ರಮಾಣದ ಕುಸಿತ ಉಂಟಾಗುವ ಆತಂಕ ಎದುರಾಗಿದೆ. ಅಲ್ಲದೆ ಅಕ್ಟೋಬರ್‌ನಿಂದ ಆರಂಭವಾಗಬೇಕಿದ್ದ ರಬಿ ಋತುವಿನ ಗೋಧಿ, ಕಡಲೆ ಮುಂತಾದ ಬೆಳೆಗಳ ಬಿತ್ತನೆಗೆ ಅಗತ್ಯವಿರುವ ಆರಂಭಿಕ ನೀರಾವರಿ ಸೌಲಭ್ಯಕ್ಕೂ ದೊಡ್ಡ ಮಟ್ಟದ ಕೊರತೆ ಎದುರಾಗಲಿದೆ. ಈ ಕೃಷಿ ಬಿಕ್ಕಟ್ಟು ಮುಂಬರುವ ದಿನಗಳಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆಗೆ ದಾರಿ ಮಾಡಿಕೊಡಲಿದ್ದು, ಈಗಾಗಲೇ ಶೇಕಡಾ 5.95 ಕ್ಕೆ ತಲುಪಿರುವ ಆಹಾರ ಹಣದುಬ್ಬರವು ಜನಸಾಮಾನ್ಯರ ಜೇಬಿಗೆ ಮತ್ತಷ್ಟು ಕತ್ತರಿ ಹಾಕುವ ಲಕ್ಷಣಗಳಿವೆ. ಮತ್ತೊಂದೆಡೆ, ಜಲವಿದ್ಯುತ್ ಉತ್ಪಾದನೆಯಲ್ಲಿ ಉಂಟಾಗುವ ಕೊರತೆ–ಯು ದೇಶಾದ್ಯಂತ ವಿದ್ಯುತ್ ಅಭಾವ ಮತ್ತು ಬೆಲೆ ಏರಿಕೆಯಂತಹ ಮತ್ತೊಂದು ದೊಡ್ಡ ಬಿಕ್ಕಟ್ಟನ್ನು ತಂದೊಡ್ಡುವ ಸಾಧ್ಯತೆಯಿದೆ.

## ಷೇರು ಮಾರುಕಟ್ಟೆ ಕುಸಿತ



ಮುಂಬೈ,ಅ.1–ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಸತತವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೂಡಿಕೆದಾರರಲ್ಲಿ ಆತಂಕ ಹೆಚ್ಚಾಗಿದ್ದು, ಭಾರತೀಯ ಶೇರು ಮಾರುಕಟ್ಟೆಯಲ್ಲಿ ಕುಸಿತ ಮುಂದುವರಿದಿದೆ. ಇಂದು ಭಾರತೀಯ ಷೇರು ಮಾರುಕಟ್ಟೆಗಳು ಕುಸಿದವು. ಸೆನ್ಸೆಕ್ಸ್ 97 ಅಂಕಗಳು ಮತ್ತು ನಿಫ್ಟಿ 53 ಅಂಕಗಳು ಕುಸಿದವು. ಇಂದು ಆರಂಭಿಕ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಕುಸಿತ ಕಂಡು ಪ್ರಮುಖ ಮಟ್ಟಗಳಿಂದ ಕೆಳಗಿಳಿದರೆ, ಎನ್‌ಎಸ್‌ಇ ನಿಫ್ಟಿ 22,600 ಮಟ್ಟಕ್ಕಿಂತ ಕೆಳಗೆ ಕುಸಿದು ವಹಿವಾಟು ನಡೆಸುತ್ತಿದೆ. ಬೆಳಿಗ್ಗೆ 9:30 ರ ಸುಮಾರಿಗೆ, ಸೆನ್ಸೆಕ್ಸ್ 97.96 ಪಾಯಿಂಟ್‌ಗಳ ಕುಸಿತ ಕಂಡು 72,382.33 ಕ್ಕೆ ತಲುಪಿದ್ದರೆ, ನಿಫ್ಟಿ 53.71 ಪಾಯಿಂಟ್‌ಗಳ ದೌರ್ಬಲ್ಯದೊಂದಿಗೆ 22,566.75 ಕ್ಕೆ ವಹಿವಾಟು ನಡೆಸುತ್ತಿದೆ.

ವಹಿವಾಟಿನ ಆರಂಭದಲ್ಲಿ ಮಾರಾಟದ ಒತ್ತಡ ತೀವ್ರಗೊಂಡಿತು. ಸೆನ್ಸೆಕ್ಸ್ 215 ಪಾಯಿಂಟ್‌ಗಳ ಕುಸಿತದೊಂದಿಗೆ 72,257.30 ಕ್ಕೆ ತಲುಪಿತು. ಏತನ್ಮಧ್ಯೆ, ನಿಫ್ಟಿ 107.25 ಪಾಯಿಂಟ್‌ಗಳ ಕುಸಿತದೊಂದಿಗೆ 22,518.90 ಕ್ಕೆ ತಲುಪಿತು. ಇದು ಮಾರುಕಟ್ಟೆಯಲ್ಲಿ ಆರಂಭಿಕ ಏರಿಳಿತವನ್ನು ಸೂಚಿಸುತ್ತದೆ

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ ಭಾರಿ ಏರಿಕೆ ಕಂಡಿರುವುದು, ಅಮೆರಿಕದ ಬಾಂಡ್ ಇಳುವರಿ ಹೆಚ್ಚಾಗಿರುವುದು ಹಾಗೂ ವಿದೇಶಿ ಹೂಡಿಕೆದಾರರು ನಿರಂತರವಾಗಿ ತಮ್ಮ ಹೂಡಿಕೆಯನ್ನು ಹಿಂತೆಗೆದುಕೊಳ್ಳುತ್ತಿರುವುದು ಈ ಮಾರಾಟದ ಒತ್ತಡಕ್ಕೆ ಪ್ರಮುಖ ಕಾರಣಗಳಾಗಿವೆ. ಪ್ರಮುಖವಾಗಿ ಬ್ಯಾಂಕಿಂಗ್, ಆಟೋ ಮತ್ತು ಮೆಟಲ್ ವಲಯದ ಶೇರುಗಳು ತೀವ್ರ ಕುಸಿತ ಕಂಡಿದ್ದು, ಮುಂಬರುವ ದಿನಗಳಲ್ಲಿ ಹಣದುಬ್ಬರ ಹೆಚ್ಚಾಗಬಹುದು ಎಂಬ ಭೀತಿಯಿಂದ ಹೂಡಿಕೆದಾರರು ಜಾಗರೂಕತೆಯ ನಡೆ ಅನುಸರಿಸುತ್ತಿದ್ದಾರೆ.

## ಯುವ ಕಾಂಗ್ರೆಸ್ ನಿಂದ ಸಿಎಂ ಕಪ್ ಗೆ ಚಾಲನೆ



ಬೆಂಗಳೂರು,ಅ.1: ಕ್ರೀಡೆಯಿಂದ ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ. ಸದೃಢ ಹಾಗೂ ಕ್ರಿಯಾಶೀಲ ಯುವಕರಿಂದ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ ಎಂದು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ತಿಳಿಸಿದರು.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮಹಾಲಕ್ಷ್ಮೀ ಲೇಔಟ್‌ನ ಕೆ.ಜಿ. ಗ್ರೌಂಡ್‌ನಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿ "ಸಿಎಂ ಕಪ್"ಗೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆ ಕೇವಲ ಗೆಲುವು–ಸೋಲಿನ ವಿಚಾರವಲ್ಲ; ಅದು ಶಿಸ್ತು, ನಾಯಕತ್ವ, ತಂಡದ ಮನೋಭಾವ, ಸಮಯಪ್ರಜ್ಞೆ ಹಾಗೂ ಪರಸ್ಪರ ಗೌರವವನ್ನು ಬೆಳೆಸುವ ವೇದಿಕೆಯಾಗಿದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ, ಕ್ರೀಡೆ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಯುವಶಕ್ತಿಯನ್ನು ಸಕಾರಾತ್ಮಕವಾಗಿ ಬಳಸಿಕೊಂಡಾಗ ಮಾತ್ರ ಸಮಾಜದಲ್ಲಿ ಆರೋಗ್ಯಕರ ಬದಲಾವಣೆ ಸಾಧ್ಯ ಎಂದು ಸೂಚಿಸಿದರು.

ಯುವಕರು ದೇಶದ ಭವಿಷ್ಯದ ನಿರ್ಮಾತೃಗಳಾಗಿದ್ದು, ತಮ್ಮ ಪ್ರತಿಭೆ ಮತ್ತು ಶಕ್ತಿಯನ್ನು ಸಮಾಜಮುಖಿ ಕಾರ್ಯಗಳಿಗೆ ಬಳಸಬೇಕು. ಆ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಕನಸಿನ ಕೂಸಾದ ಭಾರತ್ ಜೋಡೋ ಯುವ ಸಂಘದೊಂದಿಗೆ ಕೈಜೋಡಿಸಿ, ಗ್ರಾಮ–ವಾರ್ಡ್ ಮಟ್ಟದಲ್ಲಿ ಸಂಘಟಿ–ತರಾಗಿ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಬಿಬಿಎಂಪಿ ಮಾಜಿ ಸದಸ್ಯರು ಹಾಗೂ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಅಭ್ಯರ್ಥಿಗಳಾದ ಎಸ್.ಕೇಶವಮೂರ್ತಿ, ಯುವ ಕಾಂಗ್ರೆಸ್ ಸಾಂಸ್ಕೃತಿಕ ಮತ್ತು ಕ್ರೀಡಾ ಘಟಕದ ಅಧ್ಯಕ್ಷರಾದ ಭರತ್ ಯಾದವ್ ಜೆ., ಕಾನೂನು ಘಟಕದ ರಾಜ್ಯಾಧ್ಯಕ್ಷರಾದ ಶ್ರೀಧರ್ ಜಾಧವ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ರಾಹುಲ್ ಗೌಡ, ಅಸೆಂಬ್ಲಿ ಅಧ್ಯಕ್ಷರಾದ ಸ್ಯಾಮ್ಯುಯೆಲ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಶಿವಕುಮಾರ್, ಮಹಾಲಕ್ಷ್ಮೀಪುರಂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಕೆಪಿಸಿಸಿ ವಕ್ತಾರರಾದ ಎಂ.ಜಿ.ಸುಧೀಂದ್ರ, ಬ್ಲಾಕ್ ಅಧ್ಯಕ್ಷರಾದ ರಾಮಕೃಷ್ಣ, ನಟರಾಜ್, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ರವಿಕುಮಾರ್. ಆರ್., ಕಾಂಗ್ರೆಸ್ ಮುಖಂಡರಾದ ಜನಾರ್ಧನ್ ಮತ್ತು ಬಿ.ಎನ್. ಕುಮಾರ್ ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಟಿಎಂಸಿ 4 ಖಾತೆಗಳ ತೆರವಿಗೆ ಸುಪ್ರೀಂ ಕೋರ್ಟ್ ನಕಾರ



ನವದೆಹಲಿ,ಅ.1–ಬ್ಯಾನರ್ಜಿ ನೇತೃತ್ವದ ಟಿಎಂಸಿ ಬಣಕ್ಕೆ ಸುಪ್ರೀಂ ಕೋರ್ಟ್ ದೊಡ್ಡ ಹೊಡೆತ ನೀಡಿದೆ.

ಸ್ಥಗಿತಗೊಳಿಸಲಾದ ನಾಲ್ಕು ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಅನುಮತಿ ಕೋರಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬಣ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

?ನ್ಯಾಯಮೂರ್ತಿಗಳಾದ ಎಂ. ಎಂ. ಸುಂದರೇಶ್ ಮತ್ತು ಪಿ. ಬಿ. ವರಾಲೆ ಅವರಿದ್ದ ದ್ವಿಪೀಠವು ಈ ಅರ್ಜಿಯ ವಿಚಾರಣೆ ನಡೆಸಿದ್ದು, ಕೋಲ್ಕತ್ತಾ ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ರದ್ದುಪಡಿಸಲು ಅಥವಾ ಅದರಲ್ಲಿ ಹಸ್ತಕ್ಷೇಪ ಮಾಡಲು ಸ್ಪಷ್ಟವಾಗಿ ನಿರಾಕರಿಸಿದೆ. ಸಂವಿಧಾನದ ವಿಧಿ 136 ರ ಅಡಿಯಲ್ಲಿ ನೀಡಲಾಗಿರುವ ವಿಶೇಷ ಹಕ್ಕನ್ನು ಚಲಾಯಿಸಲು ನಿರಾಕರಿಸಿದ ಸುಪ್ರೀಂ ಕೋರ್ಟ್, ಈ ಪ್ರಕರಣದ ಮೂಲ ವಿಚಾರಣೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಕೋಲ್ಕತ್ತಾ ಹೈಕೋರ್ಟ್‌ಗೆ ನಿರ್ದೇಶನ ನೀಡಿದೆ.

ವಿಚಾರಣೆ ವೇಳೆ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗವು ಈಗಾಗಲೇ ಪಕ್ಷದ ಹೆಸರು ಮತ್ತು ಅಧಿಕೃತ ಚಿಹ್ನೆಯನ್ನು ಸ್ಥಗಿತಗೊಳಿಸಿದ ಮಾಡಿರುವ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿತು. ಸಾರ್ವಜನಿಕ ವಲಯದ ಬ್ಯಾಂಕ್ ಖಾತೆಗಳಲ್ಲಿರುವ ಸುಮಾರು 804 ಕೋಟಿ ರೂಪಾಯಿಗಳಷ್ಟು ಭಾರಿ ಮೊತ್ತಕ್ಕೆ ನಿಜವಾದ ಹಕ್ಕುದಾರರು ಯಾರು ಎಂಬ ಮೂಲ ಹಕ್ಕುಸ್ವಾಮ್ಯದ ವಿಷಯವು ಇನ್ನೂ ಕಾನೂನಾತ್ಮಕವಾಗಿ ಅಂತಿಮಗೊಳ್ಳಬೇಕಿದೆ. ಆದ್ದ–ರಿಂದ ಈ ಸೂಕ್ಷ್ಮ ಹಂತದಲ್ಲಿ ಪ್ರಕರಣದ ಗುಣಾವಗುಣಗಳ ಕುರಿತು ಯಾವುದೇ ಅಂತಿಮ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ ಎಂದು ನ್ಯಾಯಪೀಠ ತಿಳಿಸಿತು.

ಆಗಸ್ಟ್ 27 ರಂದು ಕೋಲ್ಕತ್ತಾ ಹೈಕೋರ್ಟ್, ಮಮತಾ ಬ್ಯಾನರ್ಜಿ ನೇತೃತ್ವದ ಬಣಕ್ಕೆ ಈ ನಾಲ್ಕು ಖಾತೆಗಳ ವಹಿವಾಟು ನಡೆಸಲು ಅನುಮತಿ ನೀಡಲು ನಿರಾಕರಿಸಿತ್ತು. ಪಕ್ಷದ ದೈನಂದಿನ ಹಾಗೂ ಕಾನೂನಾತ್ಮಕ ವೆಚ್ಚಗಳನ್ನು ನಿರ್ವಹಿಸಲು ಹೈಕೋರ್ಟ್ ನೇಮಿಸಿದ ವಿಶೇಷ ಅಧಿಕಾರಿಯ ಉಸ್ತುವಾರಿಯಲ್ಲಿ ಈಗಾಗಲೇ ಮೂರು ಖಾತೆಗಳನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ. ಹೀಗಿರುವಾಗ, ಪ್ರಸ್ತುತ ನಾಲ್ಕು ಖಾತೆಗಳ ಮೇಲಿನ ತಡೆಯನ್ನು ತೆರವುಗೊಳಿಸಿದರೆ ಹೈಕೋರ್ಟ್‌ನ ಹಿಂದಿನ ಆದೇಶದ ಉದ್ದೇಶಕ್ಕೆ ಧಕ್ಕೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ಪಶ್ಚಿಮ ಬಂಗಾಳ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಹಾಗೂ ಪಕ್ಷದ ರೆಬೆಲ್ ಬಣ ನೀಡಿದ್ದ ದೂರಿನ ಆಧಾರದ ಮೇಲೆ ಈ ಖಾತೆಗಳ ವಹಿವಾಟನ್ನು ಸ್ಥಗಿತಗೊಳಿಸಲಾಗಿತ್ತು. ಟಿಎಂಸಿ ಪಕ್ಷದ ಆಂತರಿಕ ಭಿನ್ನಾಭಿಪ್ರಾಯ, ಬಣಗಳ ನಡುವಿನ ಅಧಿಕಾರ ಹಾಗೂ ಸಂಸದೀಯ ಹಕ್ಕಿನ ಸಂಘರ್ಷ ತೀವ್ರಗೊಂಡಿರುವ ಬೆನ್ನಲ್ಲೇ ಈ ಕೋಟಿಗಟ್ಟಲೆ ಹಣವಿರುವ ಬ್ಯಾಂಕ್ ಖಾತೆಗಳ ವಿವಾದವು ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಭಾರಿ ಕುತೂಹಲ ಮೂಡಿಸಿದೆ.

## ಚು ಆಯೋಗದ ವಿರುದ್ಧ ರಾಹುಲ್ ವಾಗ್ದಾಳಿ



ನವದೆಹಲಿ,ಅ.1– ಹೊಸ ಮತದಾರರ ನೋಂದಣಿಗೆ ಸಂಬಂಧಿಸಿದ ಆನ್‌ಲೈನ್ ನಮೂನೆ 6 ರಲ್ಲಿ ಮಾಡಲಾದ ಬದಲಾವಣೆಗಳ ವಿಚಾರವಾಗಿ ಕೇಂದ್ರ ಚುನಾವಣಾ ಆಯೋಗ ಮತ್ತು ಕಾಂಗ್ರೆಸ್ ನಾಯಕರ ನಡುವಿನ ರಾಜಕೀಯ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಈ ಕುರಿತು ಚುನಾವಣಾ ಆಯೋಗವನ್ನು ನೇರವಾಗಿ ಗುರಿಯಾಗಿಸಿಕೊಂಡು ಪ್ರಶ್ನೆಗಳನ್ನು ಎತ್ತಿದ್ದಾರೆ. ಆನ್‌ಲೈನ್ ಫಾರ್ಮ್ 6 ರಲ್ಲಾದ ಬದಲಾವಣೆಗಳು ಕಾನೂನುಬಾಹಿರವಾಗಿ ನಡೆದಿವೆ ಎಂದು ಚುನಾವಣಾ ಆಯೋಗದ ಆಯುಕ್ತರೇ ದಾಖಲಿಸಿದ್ದಾರೆ ಎಂದು ಪ್ರತಿಪಾದಿಸಿರುವ ಅವರು, ಚುನಾವಣಾ ಆಯೋಗದಲ್ಲಿ ಈ ಬದಲಾವಣೆ ಮಾಡಲು ಯಾರಿಗೆ ಆದೇಶ ನೀಡಲಾಗಿತ್ತು ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

?ಗುರುವಾರ ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲಿ ಪೋಸ್ಟ್ ಹಂಚಿಕೊಂಡಿರುವ ರಾಹುಲ್ ಗಾಂಧಿ, ತಂತ್ರಜ್ಞಾನ ಸೇವೆ ಒದಗಿಸುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಕಂಪನಿಗೆ ನಮೂನೆಯಲ್ಲಿ ಬದಲಾವಣೆ ಮಾಡಲು ಆಯೋಗದ ಯಾವ ಅಧಿಕಾರಿ ನಿರ್ದೇಶನ ನೀಡಿದ್ದರು ಮತ್ತು ಟಿಸಿಎಸ್‌ನಲ್ಲಿ ಯಾವ ಮಟ್ಟದ ಅಧಿಕಾರಿಯು ಅದನ್ನು ಅನುಮೋದಿಸಿ ಜಾರಿಗೆ ತಂದಿದ್ದಾರೆ ಎಂದು ಚಾಟಿ ಬೀಸಿದ್ದಾರೆ. ಇದೇ ವೇಳೆ ಈ ಅಕ್ರಮ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಸಾಫ್ಟ್‌ವೇರ್ ಕಂಪನಿಯ ಮೇಲೆ ಯಾವುದೇ ರೀತಿಯ ಒತ್ತಡ ಹೇರಲಾಗಿತ್ತೇ ಎಂದೂ ಅವರು ಪ್ರಶ್ನಿಸಿದ್ದಾರೆ. ಮತದಾರರ ನೋಂದಣಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಂತೆ ಆಗ್ರಹಿಸಿರುವ ಈ ನೇರ ಪ್ರಶ್ನೆಗಳು ಈಗ ಇಡೀ ವಿವಾದದ ಮುಖ್ಯ ಕೇಂದ್ರಬಿಂದುವಾಗಿ ಹೊರಹೊಮ್ಮಿದ್ದು, ರಾಜಕೀಯ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿವೆ.

## 5,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಕನ್ನಡಕ ವಿತರಣೆ



ಬೆಂಗಳೂರು, ಅ. 1– ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ನೇತ್ರ ತಪಾಸಣೆ ನಡೆಸಿ, ದೃಷ್ಟಿದೋಷ ಹೊಂದಿರುವ 5,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಕನ್ನಡಕಗಳನ್ನು ವಿತರಿಸಲಾಯಿತು.

ನಗರದ ಆಡುಗೋಡಿಯ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ಹಾಗೂ ಲಯನ್ಸ್ ಕ್ಲಬ್ ಮುಖ್ಯಸ್ಥೆ ಚಾಮುಂಡೇಶ್ವರಿ ರಾಮಲಿಂಗಾರೆಡ್ಡಿರವರ ನೇತೃತ್ವದಲ್ಲಿ ನಡೆದ ಈ ಸಮಾಜಮುಖಿ ಕಾರ್ಯಕ್ರಮದಲ್ಲಿ, ದೃಷ್ಟಿ ಸಮಸ್ಯೆ ಹೊಂದಿರುವ 20 ವಿದ್ಯಾರ್ಥಿಗಳನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಗಿದ್ದು, ಅವರ ಶಸ್ತ್ರಚಿಕಿತ್ಸೆಯನ್ನೂ ಸಂಪೂರ್ಣ ಉಚಿತವಾಗಿ ನೆರವೇರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಉತ್ಕೃತಿ ಎನ್‌ಜಿಒ ವತಿಯಿಂದ ಕನ್ನಡಕಗಳನ್ನು ದೇಣಿಗೆಯಾಗಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಬಿ.ಎನ್. ಮಂಜುನಾಥ್‌ರೆಡ್ಡಿ, ಆಡುಗೋಡಿ ಮಾಜಿ ಕಾರ್ಪೊರೇಟರ್ ಬಿ. ಮೋಹನ್, ಕಾಂಗ್ರೆಸ್ ನಾಯಕಿ ಕವಿತಾ ಶ್ರೀನಾಥ್, ಲಯನ್ಸ್ ಕ್ಲಬ್ ಅಧ್ಯಕ್ಷೆ ಗೀತಾ ರೆಡ್ಡಿ, ಡಾ. ಶ್ರೀನಿವಾಸ್, ಸುಜಾತ ವೆಂಕಟಸ್ವಾಮಿ, ರಘು ಸೇರಿದಂತೆ ಹಲವು ಗಣ್ಯರು, ಮುಖಂಡರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಕಣ್ಣಿನ ಆರೋಗ್ಯದ ಕಾಳಜಿಯೊಂದಿಗೆ, ಅವರ ಉಜ್ವಲ ಭವಿಷ್ಯಕ್ಕೆ ಬೆಳಕು ನೀಡುವ ಈ ಸೇವಾ ಕಾರ್ಯ ಶ್ಲಾಘನೀಯವಾಗಿದೆ.

## ಭಾರತದ ಕ್ರೀಡಾ ತಂಡಕ್ಕೆ ಬೆಂಬಲ

ಮುಂಬಯಿ,ಅ.1––ಈ ವರ್ಷ ನಡೆಯುವ ನಾಲ್ಕು ಪ್ರಮುಖ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತ ತಂಡದ ಅಧಿಕೃತ ರಿಟೇಲ್ ಬ್ಯಾಂಕಿಂಗ್ ಪಾಲುದಾರಿಕೆ ಹೊಂದಿರುವ ದೇಶದ ಖಾಸಗಿ ವಲಯದ ಪ್ರಮುಖ ಯೆಸ್ ಬ್ಯಾಂಕ್ ಕ್ರೀಡಾಪಟುಗಳಿಗೆ ಬೆಂಬಲ ನೀಡಲಿದೆ. ಭಾರತದ ಒಲಿಂಪಿಕ್ ಸಂಸ್ಥೆ (ಐಒಸಿ) ಜೊತೆಗಿನ ಸಹಭಾಗಿತ್ವದ ಮೂಲಕ ಭಾರತ ತಂಡದ ಅಧಿಕೃತ ರಿಟೇಲ್ ಬ್ಯಾಂಕಿಂಗ್ ಪಾಲುದಾರನಾಗಿ ಗಟ್ಟಿಯಾಗಿ ನಿಂತಿದೆ. ಈ ಸಹಭಾಗಿತ್ವದ ಮೂಲಕ ಜಪಾನ್‌ನ ಐಚಿ–ನಗೋಯಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್, ಮುಂಬರುವ ಯೂತ್ ಒಲಿಂಪಿಕ್ ಗೇಮ್ಸ್, ಏಷ್ಯನ್ ಇಂಡೋರ್ ಮತ್ತು ಮಾರ್ಷಲ್ ಆರ್ಟ್ಸ್ ಗೇಮ್ಸ್ ಹಾಗೂ ಇತ್ತೀಚೆಗೆ ಮುಕ್ತಾಯಗೊಂಡ ಕಾಮನ್‌ವೆಲ್ತ್ ಗೇಮ್ಸ್ ಸೇರಿದಂತೆ ನಾಲ್ಕು ಪ್ರಮುಖ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತದ ಕ್ರೀಡಾ ತಂಡಕ್ಕೆ ಯೆಸ್ ಬ್ಯಾಂಕ್ ಬೆಂಬಲ ನೀಡುತ್ತಿದೆ. 2024ರ ಪ್ಯಾರಿಸ್ ಒಲಿಂಪಿಕ್ ಗೇಮ್ಸ್‌ನಲ್ಲಿ ಟೀಮ್ ಇಂಡಿಯಾದ ಅಧಿಕೃತ ಬ್ಯಾಂಕಿಂಗ್ ಪಾಲುದಾರನಾಗಿ ಹೊಂದಿದ್ದ ಹಿಂದಿನ ಸಹಭಾಗಿತ್ವವನ್ನು ಮುಂದುವರಿಸಿರುವ ಯೆಸ್ ಬ್ಯಾಂಕ್, ಜಾಗತಿಕ ಕ್ರೀಡಾ ವೇದಿಕೆಯಲ್ಲಿ ಭಾರತದ ಕ್ರೀಡಾಪಟುಗಳನ್ನು ಸಬಲಗೊಳಿಸುವ ಮತ್ತು ಬೆಂಬಲಿಸುವ ತನ್ನ ದೀರ್ಘಾವಧಿಯ ಬದ್ಧತೆಯನ್ನು ಈಗ ಮತ್ತಷ್ಟು ಬಲಪಡಿಸಿದೆ.

ಪಂಜುವಾಣಿ

# ಚಿತ್ರ ವಾಣಿ

ಗುರುವಾರ 01 ಅಕ್ಟೋಬರ್ 2026, ಬೆಂಗಳೂರು

# ಲಂಕಾಧಿಪತಿಯ ಗತ್ತಿನಲ್ಲಿ ಯಶ್

ಸಂಜಯ್ ನಾಗ್,ಹಾಸನ



**'ರಾಮಾಯಣ'ದ ರಾವಣ ಲುಕ್ ರಿವೀಲ್**

ಭಾರತೀಯ ಚಿತ್ರರಂಗದಲ್ಲಿ ಭಾರಿ ನಿರೀಕ್ಷೆ ಮೂಡಿಸಿರುವ 'ರಾಮಾಯಣ' ಇದೀಗ ರಾಕಿಂಗ್ ಸ್ಟಾರ್ ಯಶ್ ಅವರ ರಾವಣನ ಅವತಾರದ ಮೂಲಕ ಮತ್ತಷ್ಟು ಕುತೂಹಲ ಕೆರಳಿಸಿದೆ. ಚಿತ್ರದ ನಿರ್ಮಾಪಕರು ಯಶ್ ಅಭಿನಯದ ಲಂಕಾಧಿಪತಿ ರಾವಣನ ಮೊದಲ ಅಧಿಕೃತ ಪೋಸ್ಟರ್‌ನ್ನು ಬಿಡುಗಡೆ ಮಾಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಈ ಲುಕ್ ಗಮನ ಸೆಳೆಯುತ್ತಿದೆ.

ಟ್ರೇಲರ್ ಬಿಡುಗಡೆಯಾದಾಗಿನಿಂದಲೇ ಯಶ್ ಅವರ ರಾವಣನ ಪಾತ್ರದ ಬಗ್ಗೆ ಪ್ರೇಕ್ಷಕರಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿತ್ತು. ಇದೀಗ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ರಾಜ ಗಾಂಭೀರ್ಯ, ಶಕ್ತಿ ಮತ್ತು ತೀವ್ರತೆಯನ್ನು ಒಟ್ಟುಗೂಡಿಸಿರುವ ರಾವಣನ ಪಾತ್ರದಲ್ಲಿ ಯಶ್ ಕಾಣಿಸಿಕೊಂಡಿದ್ದಾರೆ. ರತ್ನಖಚಿತ ಚಿನ್ನದ ಕಿರೀಟ, ಮುತ್ತಿನ ಹಾರಗಳು ಹಾಗೂ ಚಿನ್ನದ ಆಭರಣಗಳೊಂದಿಗೆ ಅವರು ಲಂಕಾಧಿಪತಿಯ ವೈಭವವನ್ನು ಪ್ರತಿಬಿಂಬಿಸಿದ್ದಾರೆ.

ಮಹಾನ್ ಜ್ಞಾನಿ, ಪರಾಕ್ರಮಿ ರಾಜ ಮತ್ತು ಪ್ರಭಾವಿ ಆಡಳಿತಗಾರನಾಗಿ ಪುರಾಣಗಳಲ್ಲಿ ಚಿತ್ರಿತವಾಗಿರುವ ರಾವಣನ ಪಾತ್ರವನ್ನು ಬೃಹತ್ ದೃಶ್ಯವೈಭವದೊಂದಿಗೆ ಕಟ್ಟಿಕೊಡುವ ಪ್ರಯತ್ನ ಚಿತ್ರದಲ್ಲಿದೆ. ಯಶ್ ಅವರ ಗಂಭೀರ ನೋಟ ಮತ್ತು ಪಾತ್ರಕ್ಕೆ ಹೊಂದುವ ಗೆಟಪ್ ಪೋಸ್ಟರ್‌ನ ಪ್ರಮುಖ ಆಕರ್ಷಣೆಯಾಗಿದೆ.

ಮಹಾಕಾವ್ಯ 'ರಾಮಾಯಣ'ವನ್ನು ವಿಶಾಲ ದೃಶ್ಯಕಾವ್ಯವಾಗಿ ರೂಪಿಸುತ್ತಿರುವ ನಿರ್ದೇಶಕ ನಿತೀಶ್ ತಿವಾರಿ ಅವರ ಚಿತ್ರದಲ್ಲಿ ಶ್ರೀರಾಮನಾಗಿ ರಣಬೀರ್ ಕಪೂರ್, ಸೀತೆಯಾಗಿ ಸಾಯಿ ಪಲ್ಲವಿ, ರಾವಣನಾಗಿ ಯಶ್, ಹನುಮಂತನಾಗಿ ಸನ್ನಿ ಡಿಯೋಲ್ ಹಾಗೂ ಲಕ್ಷ್ಮಣನಾಗಿ ರವಿ ದುಬೆ ಅಭಿನಯಿಸುತ್ತಿದ್ದಾರೆ.

ನಮಿತ್ ಮಲ್ಹೋತ್ರಾ ಅವರ ಪ್ರೈಮ್ ಫೋಕಸ್ ಸ್ಟುಡಿಯೋಸ್, ಎಂಟು ಬಾರಿ ಆಸ್ಕರ್ ಪ್ರಶಸ್ತಿ ವಿಜೇತ ಡಿಎನ್‌ಇಜಿ ಹಾಗೂ ಯಶ್ ಅವರ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಜಂಟಿಯಾಗಿ ಚಿತ್ರ ನಿರ್ಮಿಸುತ್ತಿವೆ. ಎರಡು ಭಾಗಗಳಲ್ಲಿ ಮೂಡಿಬರುವ ಈ ಸಿನಿಮಾ ಹಿಂದಿ, ತಮಿಳು, ತೆಲುಗು, ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ವಿಶ್ವದಾದ್ಯಂತ ಐಮ್ಯಾಕ್ಸ್‌ನಲ್ಲಿ ತೆರೆಕಾಣಲಿರುವ 'ರಾಮಾಯಣ: ಭಾಗ 1' 2026ರ ದೀಪಾವಳಿಗೆ, 'ಭಾಗ 2' 2027ರ ದೀಪಾವಳಿಗೆ ಬಿಡುಗಡೆಯಾಗಲಿದೆ.

# ಮಲೆನಾಡಿನ ಪ್ರೇಮಕಥೆಗೆ 'ಮಿಸ್‌ಮ್ಯಾಚ್' ಸ್ಪರ್ಶ

**ಟೀಸರ್‌ಗೆ ಹೆಚ್ಚಿದ ಕುತೂಹಲ**

ಮಲೆನಾಡಿನ ಹಸಿರು ಪರಿಸರ, ವಿಭಿನ್ನ ಮನೋಭಾವದ ಇಬ್ಬರು ಯುವಕರು ಹಾಗೂ ಅವರ ನಡುವೆ ಅರಳುವ ಪ್ರೀತಿ–ಸ್ನೇಹದ ಕಥೆ ಹೊತ್ತ 'ಮಿಸ್‌ಮ್ಯಾಚ್' ಚಿತ್ರದ ಟೀಸರ್ ಇದೀಗ ಸಿನಿಪ್ರಿಯರ ಗಮನ ಸೆಳೆಯುತ್ತಿದೆ. ಚಿತ್ರತಂಡ ವಿಭಿನ್ನ ರೀತಿಯಲ್ಲಿ ಟೀಸರ್ ಬಿಡುಗಡೆ ಮಾಡುವ ಮೂಲಕ ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ.

'ಬಿ.ಟಿ.ಎಸ್' ಚಿತ್ರದ ಐದು ನಿರ್ದೇಶಕರಲ್ಲಿ ಒಬ್ಬರಾಗಿದ್ದ ಸಾಯಿ ಶ್ರೀನಿಧಿ, 'ಮಿಸ್‌ಮ್ಯಾಚ್' ಮೂಲಕ ಸ್ವತಂತ್ರ ನಿರ್ದೇಶಕರಾಗಿ ಹೆಜ್ಜೆಯಿಟ್ಟಿದ್ದಾರೆ. 'ಮಠ' ಗುರುಪ್ರಸಾದ್ ಅವರ ಗರಡಿಯಲ್ಲಿ ಪಳಗಿರುವ ಅವರು 'ನೋಡಿದವರು ಏನಂತಾರೆ' ಚಿತ್ರಕ್ಕೆ ಸಹ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಫೀಲ್‌ಗುಡ್ ಫ್ಯಾಮಿಲಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ ಚಿತ್ರದ ಬಹುತೇಕ ಚಿತ್ರೀಕರಣ ಮಲೆನಾಡಿನ ಭಾಗದಲ್ಲೇ ನಡೆದಿದ್ದು, ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ಸಾಗುತ್ತಿವೆ. ಇತ್ತೀಚೆಗೆ ಬಿಡುಗಡೆಯಾದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ.

'ಬಿ.ಟಿ.ಎಸ್'ನಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಕೌಶಿಕ್ ಹೆಗ್ಡೆ ಆಕಾಶ್ ಪಾತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. 'ಕಂಬ್ಳಿಹುಳ' ಸೇರಿದಂತೆ ಹಲವು ಚಿತ್ರಗಳಲ್ಲಿ ಅಭಿನಯಿಸಿರುವ ಅಶ್ವಿತಾ ಹೆಗ್ಡೆ ಮೇಘನಾ ಪಾತ್ರದಲ್ಲಿ ನಾಯಕಿಯಾಗಿದ್ದಾರೆ. ತೇಜೇಶ್, ಅಮೃತಾ, ಅನಿರುದ್ಧ್ ಆಚಾರ್ಯ, ನಾಗೇಂದ್ರ ಶಾ, ಲಕ್ಷ್ಮೀ ಸಿದ್ದಯ್ಯ ಸೇರಿದಂತೆ ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ.

ಸಾಯಿ ಶ್ರೀನಿಧಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರಕ್ಕೆ ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ನಾಲ್ಕು ಹಾಡುಗಳಿದ್ದು, ಮೂರು ಹಾಡುಗಳಿಗೆ ಜೂಡಾ ಸ್ಯಾಂಡಿ ಧ್ವನಿಯಾಗಿದ್ದಾರೆ. ಲಕ್ಷ್ಮೀ ಬೆಳ್ಮಣ್ಣು ಒಂದು ಹಾಡನ್ನು ಹಾಡಿದ್ದಾರೆ. ಗಣೇಶ್ ಮಹಾಬಲ ಛಾಯಾಗ್ರಹಣ, ದೀಪಕ್ ಕುಲಾಲ್ ಸಂಕಲನದ ಜವಾಬ್ದಾರಿ ನಿರ್ವಹಿಸಿದ್ದಾರೆ. ತೇಜಸ್ ವೆಂಕಟೇಶ್ ಅವರ ತೇಜಸ್ ಪಬ್ಲಿಕೇಶನ್ ಮತ್ತು ಸಟಾಯರ್ ಸಂಸ್ಥೆ ಚಿತ್ರವನ್ನು ನಿರ್ಮಿಸಿದೆ.

ಪ್ರೀತಿ, ಸ್ನೇಹ, ಬಾಂಧವ್ಯ ಮತ್ತು ಹಾಸ್ಯದ ನಡುವೆ ಮೂಡುವ ಭಾವನಾತ್ಮಕ ನಂಟು ಚಿತ್ರದ ವಿಶೇಷತೆ ಎನ್ನುತ್ತಾರೆ ನಿರ್ದೇಶಕರು.



# ಗಾಂಧಿನಗರದ ಒಳಜಗತ್ತಿನ ಅನಾವರಣ



**ತೆರೆಗೆ ಬರಲಿದೆ '18 ಎಕರೆ ಸಿನಿಮಾ ಲಕ್ಕಪ್ಪ'**

ಚಿತ್ರರಂಗದ ಬೆಳ್ಳಿತೆರೆಯ ಹಿಂದೆ ನಡೆಯುವ ಹಲವು ಸಂಗತಿಗಳು ಸಾಮಾನ್ಯ ಪ್ರೇಕ್ಷಕರಿಗೆ ಅಪರಿಚಿತ. ಕನಸು ಹೊತ್ತು ಬರುವ ಹೊಸ ಕಲಾವಿದರು, ಚಿತ್ರ ನಿರ್ಮಾಣದ ಅನುಭವವಿಲ್ಲದೆ ಸಿನಿಮಾ ಕ್ಷೇತ್ರಕ್ಕೆ ಕಾಲಿಡುವ ನಿರ್ಮಾಪಕರು ಎದುರಿಸುವ ಸವಾಲುಗಳು ಹಾಗೂ ಅವರ ನಂಬಿಕೆಯನ್ನು ಕೆಲವರು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬ ವಿಚಾರಗಳನ್ನು ತೆರೆಗೆ ತರಲು ಸಿದ್ಧವಾಗಿದೆ '18 ಎಕರೆ ಸಿನಿಮಾ ಲಕ್ಕಪ್ಪ'.

'ಗಾಯತ್ರಿ' ಹಾಗೂ 'ಪ್ರೀತಿಯ ಹುಚ್ಚ' ಚಿತ್ರಗಳನ್ನು ನಿರ್ದೇಶಿಸಿರುವ ವಿ.ಕುಮಾರ್ (ರಾಘವ ವಿನೋದ್ ಕುಮಾರ್) ಕಥೆ, ಚಿತ್ರಕಥೆ, ಸಂಭಾಷಣೆ ಮತ್ತು ಸಾಹಿತ್ಯ ರಚಿಸಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಗಾಂಧಿನಗರದ ಸುತ್ತಮುತ್ತ ನಡೆಯುವ ಕೆಲವು ಘಟನೆಗಳು ಹಾಗೂ ಚಿತ್ರರಂಗದ ಒಳಜಗತ್ತಿನ ಅನುಭವಗಳನ್ನು ಆಧರಿಸಿ ಸಿನಿಮಾ ರೂಪಿಸಲಾಗಿದೆ.

ಹೊಸ ನಾಯಕ–ನಾಯಕಿಯರು ಚಿತ್ರರಂಗಕ್ಕೆ ಕಾಲಿಟ್ಟಾಗ ಎದುರಾಗುವ ಅನುಭವಗಳು, ಪ್ರೊಡಕ್ಷನ್‌ನ ಅರಿವಿಲ್ಲದೆ ಬರುವ ನಿರ್ಮಾಪಕರನ್ನು ಮ್ಯಾನೇಜರ್‌ಗಳು ಹೇಗೆ ನಂಬಿಸಿ ಸಂಕಷ್ಟಕ್ಕೆ ಸಿಲುಕಿಸುತ್ತಾರೆ ಎಂಬ ಅಂಶಗಳ ಜತೆಗೆ, ಕಲಾವಿದರ ಬದುಕು ಮತ್ತು ಸಿನಿಮಾದ ನಡುವಿನ ಸಂಬಂಧವನ್ನೂ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ.

ಮಂಡ್ಯ, ಕೋಲಾರ, ಬೆಂಗಳೂರು, ಸಕಲೇಶಪುರ ಹಾಗೂ ಶ್ರವಣಬೆಳಗೊಳ ಸುತ್ತಮುತ್ತ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಕುಮಾರ್ ಮೂವೀಸ್ ಬ್ಯಾನರ್‌ನಲ್ಲಿ ದಯಾನಂದ್ ಕೆ., ಸುಬ್ರಮಣಿ ರಾಮಗೊಂಡನಹಳ್ಳಿ ಹಾಗೂ ಸ್ನೇಹಿತರು ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ. ತಸೀ ರಂಗರಾಜನ್ ಸಂಗೀತ, ಅರುಣ್ ಛಾಯಾಗ್ರಹಣ ಹಾಗೂ ದುರ್ಗಾಪ್ರಸಾದ್ ಸಂಕಲನ ಚಿತ್ರಕ್ಕಿದೆ. ಹರಿಚೇತು ಮತ್ತು ಸಂಜನಾ ನಾಯ್ಡು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದು, ಸಂಗೀತ, ಸುಬ್ರಮಣಿ, ರಾಜಶೇಖರ, ದಯಾನಂದ, ಸತ್ಯಸಾಮ್ರಾಟ್, ಲಿಂಗೇಶ್, ನಯನಕೃಷ್ಣ ಸೇರಿದಂತೆ ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ.

ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ಚಿತ್ರ ಸೆನ್ಸಾರ್ ಮಂಡಳಿಯಿಂದ ಯು/ಎ ಪ್ರಮಾಣಪತ್ರ ಪಡೆದಿದೆ. ವಿಭಿನ್ನ ಶೀರ್ಷಿಕೆಯೊಂದಿಗೆ ಗಮನ ಸೆಳೆಯುತ್ತಿರುವ '18 ಎಕರೆ ಸಿನಿಮಾ ಲಕ್ಕಪ್ಪ' ಮುಂದಿನ ತಿಂಗಳು ತೆರೆಗೆ ಬರಲಿದೆ ಎಂದು ನಿರ್ದೇಶಕ ವಿ.ಕುಮಾರ್ ತಿಳಿಸಿದ್ದಾರೆ.

# ಎರಡೇ ದಿನದಲ್ಲಿ 5 ಲಕ್ಷ ವೀಕ್ಷಣೆ

ಬಹುನಿರೀಕ್ಷಿತ ಸಸ್ಪೆನ್ಸ್ ಕ್ರೈಮ್ ಥ್ರಿಲ್ಲರ್ 'ರಾಜನಿವಾಸ' ಚಿತ್ರದ ನಾಲ್ಕನೇ ಲಿರಿಕಲ್ ಸಾಂಗ್ 'ಅಣ್ಣ ಯಾರು' ಬಿಡುಗಡೆಯಾದ ಬೆನ್ನಲ್ಲೇ ಭರ್ಜರಿ ಸದ್ದು ಮಾಡುತ್ತಿದೆ. ಹಾಡು ಬಿಡುಗಡೆಯಾಗಿ ಕೇವಲ ಎರಡು ದಿನಗಳಲ್ಲೇ ಐದು ಲಕ್ಷಕ್ಕೂ ಅಧಿಕ ವೀಕ್ಷಣೆ ಪಡೆದುಕೊಂಡಿದ್ದು, ಸಿನಿಪ್ರಿಯರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ತಂಬೂರಿ ಫಿಲ್ಮ್ಸ್ ಅರ್ಪಿಸುವ, ಕ್ಯಾನೋಪಸ್ ಸಿನಿಮಾಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ 'ರಾಜನಿವಾಸ' ಚಿತ್ರ ಈಗಾಗಲೇ ತನ್ನ ವಿಭಿನ್ನ ಕಥಾಹಂದರದ ಮೂಲಕ ಕುತೂಹಲ ಮೂಡಿಸಿದೆ. ಇದೀಗ 'ಅಣ್ಣ ಯಾರು' ಹಾಡಿನ ಜನಪ್ರಿಯತೆ ಚಿತ್ರದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಕೃತಿಕಾ, ರಾಘವ್ ಹಾಗೂ ಶ್ರೀನಗರ ಕಿಟ್ಟಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಚಿತ್ರಕ್ಕೆ ದಾ.ಪಿ. ಆಂಜನಪ್ಪ ನಿರ್ಮಾಪಕರಾಗಿದ್ದು, ಲೋಕೇಶ್ ಗೌಡ ಸಹ ನಿರ್ಮಾಪಕರಾಗಿದ್ದಾರೆ. ಮಿಥುನ್ ಸುವರ್ಣ ನಿರ್ದೇಶನದ ಚಿತ್ರಕ್ಕೆ ವಿಜಯ್ ಯಾರ್ಡ್ಲಿ ಸಂಗೀತ ಸಂಯೋಜಿಸಿದ್ದಾರೆ.

ಸಸ್ಪೆನ್ಸ್ ಮತ್ತು ಕ್ರೈಮ್ ಅಂಶಗಳನ್ನು ಒಳಗೊಂಡಿರುವ 'ರಾಜನಿವಾಸ' ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ನವೆಂಬರ್ 6ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.



**'ರಾಜನಿವಾಸ'ದ 'ಅಣ್ಣ ಯಾರು' ಹಾಡಿಗೆ ಭರ್ಜರಿ ರೆಸ್ಪಾನ್ಸ್**

# 'ರಾಮರಸ'ದಲ್ಲಿ ಕೋಮಲ್ ಕುಮಾರ್ ಹೊಸ ಅವತಾರ



**ಫಸ್ಟ್‌ಲುಕ್‌ಗೆ ಸಿಕ್ಕಿದೆ ಕುತೂಹಲದ ಸ್ಪರ್ಶ**

ಸಾಮಾನ್ಯವಾಗಿ ಹಾಸ್ಯಪಾತ್ರಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿರುವ ಕೋಮಲ್ ಕುಮಾರ್ ಇದೀಗ ವಿಭಿನ್ನ ವೇಷಭೂಷಣ ಹಾಗೂ ನಿಗೂಢ ಪಾತ್ರದ ಮೂಲಕ ಗಮನ ಸೆಳೆಯಲು ಸಜ್ಜಾಗಿದ್ದಾರೆ. ಬಿ.ಎಂ. ಗಿರಿರಾಜ್ ನಿರ್ದೇಶನದ ಮಿಥಿಕಲ್ ಫ್ಯಾಂಟಸಿ ಡ್ರಾಮಾ 'ರಾಮರಸ'ದಿಂದ ಕೋಮಲ್ ಕುಮಾರ್ ಅವರ ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಚಿತ್ರದಲ್ಲಿನ ಅವರ ಪಾತ್ರದ ಬಗ್ಗೆ ಕುತೂಹಲ ಮೂಡಿಸಿದೆ.

ಗುರು ದೇಶಪಾಂಡೆ ಅವರ ಜಿ ಸಿನಿಮಾಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದಲ್ಲಿ ಕೋಮಲ್ ಕುಮಾರ್ ತಮ್ಮದೇ ಹೆಸರಿನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ನಿಗೂಢತೆ ಮತ್ತು ಗಂಭೀರತೆಯ ಛಾಯೆಯೊಂದಿಗೆ ಕಾಣಿಸಿಕೊಂಡಿರುವ ಅವರು, ಈ ಬಾರಿ ತಮ್ಮ ಎಂದಿನ ಕಾಮಿಡಿ ಇಮೇಜ್‌ಗಿಂತ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುವ ಸೂಚನೆ ನೀಡಿದ್ದಾರೆ.

ಜಾನಪದ, ಫ್ಯಾಂಟಸಿ ಹಾಗೂ ಸ್ಥಳೀಯ ಆಧ್ಯಾತ್ಮಿಕ ಆಚರಣೆಗಳ ಹಿನ್ನೆಲೆಯನ್ನು ಒಳಗೊಂಡಿರುವ 'ರಾಮರಸ' ಪರಾಶಕ್ತಿಯ ದೈವಿಕ ಆಟವನ್ನು ಕೇಂದ್ರವಾಗಿಟ್ಟುಕೊಂಡ ಕಥೆಯನ್ನು ಹೊಂದಿದೆ. ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ಗುರು ಸಿದ್ಧನಾಗಿ, ಶರಣ್ ಇಂದ್ರ ದೇವೇಂದ್ರನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಬಿಗ್ ಬಾಸ್ ಕನ್ನಡ ವಿಜೇತ ಕಾರ್ತಿಕ್ ಮಹೇಶ್, ಅದಾ ಶರ್ಮಾ, ಹೆಬಾ ಪಟೇಲ್, ಬಾಲಾಜಿ ಮನೋಹರ್, ವೈಶಾಲಿ ಹಾಗೂ ಆದಿತ್ಯಾ ಸೇರಿದಂತೆ ಹಲವು ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಗುರು ದೇಶಪಾಂಡೆ ಮತ್ತು ವಿಕ್ರಂ ಆರ್ಯ ನಿರ್ಮಿಸಿರುವ ಚಿತ್ರಕ್ಕೆ ಜಿ ಸಿನಿಮಾಸ್ ಪ್ರೊಡಕ್ಷನ್ ಹಾಗೂ ಸೆವೆನ್ ಸ್ಟಾರ್ ಮೂವೀಸ್ ಸಹಯೋಗವಿದೆ. ಕೃಷ್ಣ ಕುಮಾರ್ (ಕೆಕೆ) ಛಾಯಾಗ್ರಹಣ, ಬಿ.ಜೆ. ಭರತ್ ಸಂಗೀತ, ಅರ್ಜುನ್ ಕಿಟ್ಟು ಸಂಕಲನ ಹಾಗೂ ಹೊಸ್ಮನೆ ಮೂರ್ತಿ ಕಲಾ ನಿರ್ದೇಶನ ಚಿತ್ರಕ್ಕಿದೆ. ಡಾ. ವಿ. ನಾಗೇಂದ್ರ ಪ್ರಸಾದ್, ನಾಗಾರ್ಜುನ್ ಶರ್ಮಾ ಮತ್ತು ಪುನೀತ್ ರಂಗಸ್ವಾಮಿ ಸಾಹಿತ್ಯ ರಚಿಸಿದ್ದಾರೆ.

ಚಿತ್ರದ ಎಡಿಟಿಂಗ್, ವಿಎಫ್‌ಎಕ್ಸ್ ಹಾಗೂ ಸೌಂಡ್ ಡಿಸೈನಿಂಗ್ ಸೇರಿದಂತೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸದ್ಯ ಭರದಿಂದ ಸಾಗುತ್ತಿವೆ. ಮುಂದಿನ ದಿನಗಳಲ್ಲಿ ಚಿತ್ರದ ಮತ್ತಷ್ಟು ಪ್ರಮುಖ ಪಾತ್ರಗಳ ಫಸ್ಟ್ ಲುಕ್ ಹಾಗೂ ಟೀಸರ್ ಬಿಡುಗಡೆ ದಿನಾಂಕವನ್ನು ಘೋಷಿಸುವುದಾಗಿ ಚಿತ್ರತಂಡ ತಿಳಿಸಿದೆ.

# ಮನಸ್ಸಿನ ಕತ್ತಲೆಯೊಳಗಿನ ಕಥೆ

**ತೆರೆಗೆ ಬರಲು ಸಜ್ಜಾಗಿದೆ 'ಲಾರ್ಡ್ ಗಾಗ'**

ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಶೀರ್ಷಿಕೆ ಮತ್ತು ಹೊಸತನದ ಕಥಾಹಂದರದ ಮೂಲಕ ಗಮನ ಸೆಳೆಯುತ್ತಿರುವ ಚಿತ್ರಗಳ ಸಾಲಿಗೆ ಇದೀಗ 'ಲಾರ್ಡ್ ಗಾಗ' ಸೇರ್ಪಡೆಯಾಗಿದೆ. ಸಸ್ಪೆನ್ಸ್, ಪ್ರೀತಿ, ವ್ಯಸನ ಹಾಗೂ ಮನುಷ್ಯನ ಮನಸ್ಸಿನ ಹಲವು ಭಾವನೆಗಳನ್ನು ಒಳಗೊಂಡ ರೊಮ್ಯಾಂಟಿಕ್ ಸೈಕಾಲಜಿಕಲ್ ಥ್ರಿಲ್ಲರ್ ಆಗಿ ಈ ಸಿನಿಮಾ ರೂಪುಗೊಳ್ಳುತ್ತಿದೆ.

ಈಗಾಗಲೇ ಬಹುತೇಕ ಚಿತ್ರೀಕರಣ ಪೂರ್ಣಗೊಂಡಿರುವ ಚಿತ್ರತಂಡ, ಇತ್ತೀಚೆಗೆ ಸಿನಿಮಾದ ಶೀರ್ಷಿಕೆಯನ್ನು ಅಧಿಕೃತವಾಗಿ ಪರಿಚಯಿಸಿದೆ. ಯುವ ನಿರ್ದೇಶಕ ವೈಕೆ ಕಥೆ ಮತ್ತು ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. 'ಝೀರೋ ಗ್ರ್ಯಾವಿಟಿ ಫಿಲಂಸ್' ಬ್ಯಾನರ್‌ನಲ್ಲಿ ಉದ್ಯಮಿ ಮುಕಿ ರಘುನಾಥನ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಮನುಷ್ಯನ ಮನಸ್ಸಿನಲ್ಲಿ ಹುಟ್ಟುವ ಪ್ರೀತಿ, ಪ್ರೇಮ, ಪ್ರಣಯ, ಭಾವನೆ, ವ್ಯಸನ ಹಾಗೂ ಜೀವನದ ಆಯ್ಕೆಗಳ ಸುತ್ತ ಕಥೆ ಸಾಗಲಿದೆ. ಇವುಗಳನ್ನು ವಿಭಿನ್ನ ನಿರೂಪಣೆ ಹಾಗೂ ನವೀನ ಪ್ರಯೋಗಗಳೊಂದಿಗೆ ತೆರೆಗೆ ತರುವ ಪ್ರಯತ್ನ ಮಾಡಲಾಗಿದೆ. ಹೀಗಾಗಿ 'ಲಾರ್ಡ್ ಗಾಗ' ಅನ್ನು ಔಟ್ ಅಂಡ್ ಔಟ್ ಕಲ್ಟ್ ಸಿನಿಮಾ ಎನ್ನುವುದು ಚಿತ್ರತಂಡದ ಮಾತು.

ಚಿತ್ರದಲ್ಲಿ ಶೂನ್ಯ ನಾಯಕ ನಟನಾಗಿ ಅಭಿನಯಿಸಿದ್ದಾರೆ. ಕಥೆಯ ಪ್ರಮುಖ ಅಂಶಗಳನ್ನು ಸದ್ಯಕ್ಕೆ ಗೌಪ್ಯವಾಗಿಟ್ಟಿರುವ ಚಿತ್ರತಂಡ, ಶೀಘ್ರದಲ್ಲೇ ಪಾತ್ರಗಳು, ತಾಂತ್ರಿಕ ವರ್ಗ ಹಾಗೂ ಚಿತ್ರದ ಮತ್ತಷ್ಟು ವಿಶೇಷತೆಗಳನ್ನು ಪರಿಚಯಿಸುವ ಸಿದ್ಧತೆಯಲ್ಲಿದೆ.




ವಿಶೇಷವೆಂದರೆ, 'ಲಾರ್ಡ್ ಗಾಗ' ಕನ್ನಡಕ್ಕೆ ಸೀಮಿತವಾಗದೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ಬೆಂಗಾಲಿ, ಭೋಜಪುರಿ ಸೇರಿದಂತೆ ಏಳುಕ್ಕೂ ಹೆಚ್ಚು ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡುವ ಉದ್ದೇಶವನ್ನು ಚಿತ್ರತಂಡ ಹೊಂದಿದೆ. ವಿಭಿನ್ನ ಶೀರ್ಷಿಕೆ ಹಾಗೂ ಕುತೂಹಲ ಮೂಡಿಸುವ ಕಥೆಯೊಂದಿಗೆ ಸಿನಿಮಾ ಈಗಾಗಲೇ ಸಿನಿಪ್ರಿಯರ ಗಮನ ಸೆಳೆಯಲು ಆರಂಭಿಸಿದೆ.

# ಸೈಲಿಂಗ್‌ನಲ್ಲಿ ಭಾರತಕ್ಕೆ ಬೆಳ್ಳಿ ಪದಕ

20th Asian Games
Aichi-Nagoya 2026



ನಗೋಯಾ,ಅ.1–ಏಷ್ಯನ್ ಗೇಮ್ಸ್ 2026ರ 12ನೇ ದಿನದಂದು ಭಾರತದ ಕ್ರೀಡಾಪಟುಗಳು ಸೈಲಿಂಗ್ ವಿಭಾಗದಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದು, ಪುರುಷರ ಸ್ಕಿಫ್ ಸ್ಪರ್ಧೆಯಲ್ಲಿ ಮನು ಫ್ರಾನ್ಸಿಸ್ ಹಾಗೂ ಪ್ರಿನ್ಸ್ ಕುರಿಸಿಂಕಲ್ ನೋಬಲ್ ಜೋಡಿ ಬೆಳ್ಳಿ ಪದಕ ಗೆದ್ದು ದೇಶಕ್ಕೆ ಹೆಮ್ಮೆ ತಂದಿದ್ದಾರೆ.

ಈ ಏಷ್ಯನ್ ಗೇಮ್ಸ್‌ನಲ್ಲಿ ಸೈಲಿಂಗ್ ಕ್ಷೇತ್ರದಲ್ಲಿ ಭಾರತಕ್ಕೆ ಸಿಕ್ಕ ಮೊದಲ ಪದಕ ಇದಾಗಿದೆ. ಒಟ್ಟು 9 ರೇಸ್‌ಗಳ ಕಾಲ ನಡೆದ ಈ ತೀವ್ರ ಪೈಪೋಟಿಯಲ್ಲಿ ಭಾರತೀಯ ಜೋಡಿಯು ಕೇವಲ 23 ಅಂಕಗಳೊಂದಿಗೆ ಅತ್ಯಂತ ಸ್ಥಿರ ಪ್ರದರ್ಶನ ನೀಡಿ ಎರಡನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು. ಈ ಸ್ಪರ್ಧೆಯಲ್ಲಿ ಚೀನಾ ದೇಶವು ಚಿನ್ನದ ಪದಕವನ್ನು ಪಡೆದುಕೊಂಡರೆ, ಹಾಂಗ್ ಕಾಂಗ್ ತಂಗದ (ಬ್ರಾಂಜ್) ಪದಕಕ್ಕೆ ತೃಪ್ತಿಪಟ್ಟುಕೊಂಡಿದೆ. ಕೊಚ್ಚಿ ಮೂಲದವರಾದ ಮನು ಮತ್ತು ಪ್ರಿನ್ಸ್ ತಮ್ಮ ಚೊಚ್ಚಲ ಏಷ್ಯನ್ ಗೇಮ್ಸ್‌ನಲ್ಲೇ ಈ ಅದ್ಭುತ ಸಾಧನೆ ಮಾಡುವ ಮೂಲಕ ಭಾರತದ ಪದಕಗಳ ಪಟ್ಟಿಯನ್ನು ಮತ್ತಷ್ಟು ಬಲಪಡಿಸಿದ್ದಾರೆ. ಇದಕ್ಕೂ ಮೊದಲು, ಮಹಿಳಾ ಸ್ಕ್ವಾಷ್‌ನಲ್ಲಿ ಭಾರತ ಕಂಚಿನ ಪದಕ ಗೆದ್ದಿತ್ತು. ಈ ಎರಡು ಪದಕಗಳು ಭಾರತದ ಪದಕಗಳ ಸಂಖ್ಯೆಯನ್ನು ಹೆಚ್ಚಿಸಿವೆ.ಇಂದು ನಡೆದ ಪುರುಷರ 97 ಕೆಜಿ ಗ್ರೀಕೋ–ರೋಮನ್ ಕುಸ್ತಿ ಸ್ಪರ್ಧೆಯಲ್ಲಿ ನಿತೇಶ್ ಸಿವಾಚ್ ಫೈನಲ್ ತಲುಪಿದ ನಂತರ ಭಾರತಕ್ಕೆ ಮೊದಲ ಕುಸ್ತಿ ಪದಕ ಖಚಿತವಾಗಿದೆ.

23 ವರ್ಷದ ನಿತೇಶ್, ಕಳೆದ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ವಿಜೇತ ಮಂಗೋಲಿಯನ್ ಕುಸ್ತಿಪಟು ಗ್ಯಾಂಖುಯಿಯಾಗ್ ಗನ್ಬತಾರ್ ಅವರನ್ನು 9–0 ಅಂತರದಿಂದ ಸೋಲಿಸಿದರು. ಫೈನಲ್‌ನಲ್ಲಿ ಅವರು ಇರಾನ್‌ನ ಮೆಹದಿ ಬಲಿಹಮ್ಜೆಹ್ದೆ ಅಥವಾ ಜಪಾನ್‌ನ ಯೂರಿ ನಕಾಜಾಟೊ ಅವರನ್ನು ಎದುರಿಸಲಿದ್ದಾರೆ.

ಜಪಾನ್‌ನ ನಗೋಯಾದಲ್ಲಿ ನಡೆಯುತ್ತಿರುವ ಕ್ರೀಡಾಕೂಟದ 12ನೇ ದಿನವಾದ ಇಂದು ನಡೆದ ಪುರುಷರ ವಾಲಿಬಾಲ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡ ಪಾಕಿಸ್ತಾನದ ವಿರುದ್ಧ 0–3 ಅಂತರದಲ್ಲಿ ಸೋತಿತು. ಎಂಟು ಚಿನ್ನ ಸೇರಿದಂತೆ 60 ಪದಕಗಳೊಂದಿಗೆ ಭಾರತ ಎಂಟನೇ ಸ್ಥಾನದಲ್ಲಿದೆ

## ಆರ್ಚರಿಯಲ್ಲಿ ಗಣೇಶ್‌ಗೆ ಕಂಚು



ನಗೋಯಾ,ಅ.1–ಜಪಾನ್‌ನ ಐಚಿ–ನಗೋಯಾದಲ್ಲಿ ನಡೆಯುತ್ತಿರುವ 2026ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಶ್ರೇಷ್ಠ ಪ್ರದರ್ಶನ ಮುಂದುವರಿಸಿದ್ದು, ಅಕ್ಟೋಬರ್ 1 ರಂದು ಬಿಲ್ವಿದ್ಯೆ (ಆರ್ಚರಿ) ಮತ್ತು ಸೇಲಿಂಗ್ ಸ್ಪರ್ಧೆಗಳಲ್ಲಿ ಭಾರತಕ್ಕೆ ಮತ್ತಷ್ಟು ಪದಕಗಳು ಲಭಿಸಿವೆ.

ಗುರುವಾರ ನಡೆದ ಪುರುಷರ ಸಂಯುಕ್ತ ವೈಯಕ್ತಿಕ ಸ್ಪರ್ಧೆಯಲ್ಲಿ ಬಿಲ್ಲುಗಾರ ಗಣೇಶ್ ಮಣಿರತ್ನಂ ಕಂಚಿನ ಪದಕ ಗೆಲ್ಲುವುದರೊಂದಿಗೆ ಭಾರತ ಏಷ್ಯನ್ ಕ್ರೀಡಾಕೂಟದಲ್ಲಿ ಮೂರನೇ ಪದಕ ಗೆದ್ದುಕೊಂಡಿತು. ಸೆಮಿಫೈನಲ್ ಪಂದ್ಯದಲ್ಲಿ ಸೋಲು ಕಂಡಿದ್ದರೂ, ಕಂಚಿನ ಪದಕಕ್ಕಾಗಿ ನಡೆದ ಪ್ರಮುಖ ಪಂದ್ಯದಲ್ಲಿ ವಿಯೆಟ್ನಾಂ ದೇಶದ ಕಾಂಗ್ ಡಕ್ ಡ್ಯಾಂಗ್ ವಿರುದ್ಧ 149–144 ಅಂತರದ ಭರ್ಜರಿ ಗೆಲುವು ಸಾಧಿಸಿದರು. ಪಂದ್ಯದ ಉದ್ದಕ್ಕೂ ಅದ್ಭುತ ನಿಯಂತ್ರಣ ಪ್ರದರ್ಶಿಸಿದ ಗಣೇಶ್, ಒಟ್ಟು 15 ಬಿಲ್ ಎಸೆತಗಳಲ್ಲಿ 14 ಬಾರಿ '10' ಅಂಕದ ಗುರಿ ತಲುಪಿ ತಮಗೆ ದೊರೆತ ಅವಕಾಶವನ್ನು ಯಶಸ್ವಿಯಾಗಿ ಪದಕವನ್ನಾಗಿ ಪರಿವರ್ತಿಸಿಕೊಂಡರು.

ಇದಕ್ಕೂ ಮೊದಲು, ಭಾರತೀಯ ಮಹಿಳಾ ತಂಡ ಸ್ಕ್ವಾಷ್‌ನಲ್ಲಿ ಕಂಚು ಗೆದ್ದಿತು ಮತ್ತು ಮನು ಫ್ರಾನ್ಸಿಸ್ ಮತ್ತು ಪ್ರಿನ್ಸ್ ಕುರಿಸಿಂಕಲ್ ಜೋಡಿ ಸೇಲಿಂಗ್‌ನಲ್ಲಿ ಬೆಳ್ಳಿ ಗೆದ್ದಿತು.

ಜಪಾನ್‌ನ ನಗೋಯಾದಲ್ಲಿ ನಡೆಯುತ್ತಿರುವ ಕ್ರೀಡಾಕೂಟದ 12ನೇ ದಿನದಂದು ಭಾರತವು ಪದಕ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಇದು 10 ಚಿನ್ನ, 22 ಬೆಳ್ಳಿ ಮತ್ತು 31 ಕಂಚು ಸೇರಿದಂತೆ 63 ಪದಕಗಳನ್ನು ಹೊಂದಿದೆ.





ನಾಡಹಬ್ಬ ಮೈಸೂರು ದಸರಾ ಹಬ್ಬದಲ್ಲಿ ಭಾಗವಹಿಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯರವರು ಇಂದು ಭೇಟಿ ಮಾಡಿ ಆಹ್ವಾನ ಪತ್ರಿಕೆ ನೀಡಿದರು. ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಐಶ್ವರ್ಯ ಆರ್, ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಮತ್ತಿತರರು ಉಪಸ್ಥಿತರಿದ್ದರು.

ಫಾರಂ 7 ದುರ್ಬಳಕೆ ಆರೋಪ

# ಅನ್ಬುಕುಮಾರ್‌ಗೆ ಸಚಿವ ರಿಜ್ವಾನ್ ದೂರು

ಬೆಂಗಳೂರು, ಅ.1: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಫಾರಂ7 ದುರ್ಬಳಕೆ ಮಾಡಲಾಗುತ್ತಿದೆ ಎಂಬ ಆರೋಪದ ಹಿನ್ನಲೆಯಲ್ಲಿ ಆಹಾರ ಸಚಿವ ಹಾಗೂ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಅವರು ಗುರುವಾರ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರನ್ನು ಭೇಟಿ ಮಾಡಿ ದಾಖಲೆ ಸಮೇತ ದೂರು ಸಲ್ಲಿಸಿದರು.ಶಿವಾಜಿನಗರ ಸೇರಿದಂತೆ ವಿವಿಧೆಡೆ ಅರ್ಹ ಮತದಾರರ ಹೆಸರುಗಳನ್ನು ದೊಡ್ಡ ಪ್ರಮಾಣದಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕಲು ಫಾರಂ–7 ಸಲ್ಲಿಸಲಾಗುತ್ತಿದೆ ಎಂದು ಅವರು ಆರೋಪಿಸಿದರು. ಖಖಖ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಫಾರಂ–7 ಮೂಲಕ ನಡೆಯುವ ಇಂತಹ ಅರ್ಜಿಗಳ ಸ್ವೀಕಾರವನ್ನು ಸ್ಥಗಿತಗೊಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದರು.

**40 ಸಾವಿರಕ್ಕೂ ಹೆಚ್ಚು ಬಲ್ಕ್ ಡಿಲೀಷನ್:**

ದೂರು ನೀಡಿದ ಬಳಿಕ ಮಾತನಾಡಿದ ರಿಜ್ವಾನ್ ಅರ್ಷದ್, ತಮ್ಮ ಗಮನಕ್ಕೆ ಬರುವ ಮೊದಲೇ ಸುಮಾರು 40 ಸಾವಿರ ಹೆಸರುಗಳ ಬಲ್ಕ್ ಡಿಲೀಷನ್ ನಡೆದಿರುವ ಆರೋಪ ಕೇಳಿಬಂದಿದೆ. ವಿಷಯ ಬೆಳಕಿಗೆ ಬಂದ ಬಳಿಕ ಇಂತಹ ಪ್ರಕ್ರಿಯೆ ನಿಧಾನಗೊಂಡಿದೆ ಎಂದು ಹೇಳಿದರು.

ಖಖಖ ಆರಂಭಕ್ಕೂ ಮುನ್ನ ರಾಜ್ಯದಲ್ಲಿ ಸುಮಾರು 5.54 ಕೋಟಿ ಮತದಾರರಿದ್ದರು. ಗಣತಿ ಹಂತದಲ್ಲಿ ಸುಮಾರು ಒಂದು ಕೋಟಿ ಹೆಸರುಗಳು ವಿವಿಧ ಕಾರಣಗಳಿಗಾಗಿ ಪಟ್ಟಿಯಿಂದ ಹೊರಬಿದ್ದಿದ್ದು, ಬಳಿಕ ಸುಮಾರು 4.4 ಕೋಟಿ ಮತದಾರರು ಡ್ರಾಫ್ಟ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಈ ಡ್ರಾಫ್ಟ್ ಪಟ್ಟಿಯಲ್ಲಿರುವವರ ಪೈಕಿ ಸುಮಾರು 43.81 ಲಕ್ಷ ಮಂದಿಗೆ ನೋಟಿಸ್ ನೀಡಲಾಗಿದೆ ಎಂದು ವರದಿಯಾಗಿದೆ.

"ಬಿಎಲ್‌ಒಗಳು ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಿ, ಫಾರಂ ಪಡೆದು, ಭೌತಿಕ ಪರಿಶೀಲನೆ ನಡೆಸಿದ ಬಳಿಕ ಡ್ರಾಫ್ಟ್ ಪಟ್ಟಿ ಪ್ರಕಟಿಸಲಾಗಿದೆ. ಹಾಗಿದ್ದರೂ ಡ್ರಾಫ್ಟ್ ಪಟ್ಟಿ ಪ್ರಕಟಿಸಿದ ನಂತರ ಮತ್ತೆ 44 ಲಕ್ಷ ಜನರಿಗೆ ನೋಟಿಸ್ ನೀಡಿರುವುದೇಕೆ?" ಎಂದು ರಿಜ್ವಾನ್ ಪ್ರಶ್ನಿಸಿದರು.

**ಯಾರೇ ಬೇಕಾದರೂ ಫಾರಂ–7 ನೀಡಬಹುದೇ?**

ಫಾರಂ–7 ಮೂಲಕ ಮತದಾರರ ಹೆಸರಿನ ಕುರಿತು ಆಕ್ಷೇಪಣೆ ಸಲ್ಲಿಸುವ ವ್ಯವಸ್ಥೆಯಿದ್ದು, ಇದರ ದುರ್ಬಳಕೆ ನಡೆಯದಂತೆ ಕಟ್ಟುನಿಟ್ಟಿನ ಪರಿಶೀಲನೆ ಅಗತ್ಯ ಎಂದು ಸಚಿವರು ಒತ್ತಾಯಿಸಿದರು.

"ಮೂರನೇ ವ್ಯಕ್ತಿ ಬಂದು ಮತ್ತೊಬ್ಬ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವಂತೆ ಅರ್ಜಿ ಸಲ್ಲಿಸುವ ಅವಕಾಶವನ್ನು ದುರ್ಬಳಕೆ ಮಾಡಲಾಗುತ್ತಿದೆ. ಒಂದೇ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಫಾರಂ–7 ಸಲ್ಲಿಸುವುದಕ್ಕೆ ಕಡಿವಾಣ ಇರಬೇಕು. ಖಖಖ ಮುಗಿಯುವವರೆಗೆ ಫಾರಂ7 ಸ್ವೀಕಾರವನ್ನು ನಿಲ್ಲಿಸಬೇಕು" ಎಂದು ಆಗ್ರಹಿಸಿದರು.

ಇದೇ ವೇಳೆ, ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರುಗಳನ್ನು ತೆಗೆದುಹಾಕಲು ಫಾರಂ–7 ಅರ್ಜಿಗಳನ್ನು ಸಲ್ಲಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಕೆಲವು ಪ್ರಕರಣಗಳಲ್ಲಿ ಸಲ್ಲಿಸಿದ ಅರ್ಜಿದಾರರೇ ತಾವು ಆ ಅರ್ಜಿಗಳನ್ನು ಸಲ್ಲಿಸಿಲ್ಲ ಎಂದು ಹೇಳಿರುವ ವರದಿಗಳೂ ಪ್ರಕಟವಾಗಿವೆ.

**'ಇದು ಅಲ್ಪಸಂಖ್ಯಾತರ ವಿಚಾರ ಮಾತ್ರವಲ್ಲ'**

"ಅರ್ಹ ಮತದಾರರ ಹಕ್ಕನ್ನು ಕಸಿದುಕೊಳ್ಳಲು ಯಾವುದೇ ಅವಕಾಶ ನೀಡಬಾರದು. ಇದು ಅಲ್ಪಸಂಖ್ಯಾತರ ವಿಷಯ ಮಾತ್ರವಲ್ಲ; ದೇಶದ ಪ್ರತಿಯೊಬ್ಬ ಅರ್ಹ ಮತದಾರನ ಮತದಾನದ ಹಕ್ಕಿನ ಪ್ರಶ್ನೆ. ಅಲ್ಪಸಂಖ್ಯಾತರೂ ಎಲ್ಲರಂತೆ ಸಮಾನ ಹಕ್ಕು ಮತ್ತು ಅಧಿಕಾರ ಹೊಂದಿದ್ದಾರೆ. ಅವರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಪರಿಗಣಿಸಲು ಸರ್ಕಾರ ಅವಕಾಶ ನೀಡುವುದಿಲ್ಲ" ಎಂದು ರಿಜ್ವಾನ್ ಹೇಳಿದರು.ಫಾರಂ–7 ಅನ್ನು ಉದ್ದೇಶಪೂರ್ವಕವಾಗಿ ದುರ್ಬಳಕೆ ಮಾಡಿ ಅರ್ಹ ಮತದಾರರ ಹೆಸರುಗಳನ್ನು ಅಳಿಸಲು ಪ್ರಯತ್ನಿಸಿದರೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದೂ ಅವರು ಒತ್ತಾಯಿಸಿದರು.






# ಫಾರಂ 7 ದುರ್ಬಳಕೆಗೆ ಡಿಸಿಎಂ ಆಕ್ರೋಶ

ಬೆಂಗಳೂರು, ಅ. 1– ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಫಾರಂ 7ರ ದುರ್ಬಳಕೆ ಕುರಿತು ಉಪಮುಖ್ಯಮಂತ್ರಿ ಡಾ.ಜಿ ಪರಮೇಶ್ವರ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. "ಯಾರು ಬೇಕಾದರೂ ಫಾರಂ 7 ಭರ್ತಿ ಮಾಡಿ ಕೊಡಬಹುದು. ಅದನ್ನು ಸ್ವೀಕಾರ ಮಾಡಿದರೆ ಆ ವ್ಯಕ್ತಿಯ ಹೆಸರೇ ಹೊರಟು ಹೋಗುತ್ತೆ. ನಿಮ್ಮ ಮತ ತೆಗೆಸಬೇಕು ಅಂತ ನಾನೂ ಕೊಡಬಲ್ಲೆ. ನನಗೆ ಯಾವ ಅಡಚಣೆನೂ ಇಲ್ಲ, ಇತಿಮಿತಿ ಇಲ್ಲ" ಎಂದು ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು

ಚುನಾವಣಾ ಆಯೋಗದ ಎಸ್‌ಐಆರ್ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಚುನಾವಣಾ ಆಯೋಗವನ್ನೇ ವಜಾ ಮಾಡಬೇಕು ಅನ್ನೋ ಹಂತದಲ್ಲಿ ಇದ್ದಾರೆ. ನಮ್ಮ ಪಕ್ಷದ ವತಿಯಿಂದ ಈಗಾಗಲೇ ದೂರುಗಳನ್ನ ಕೊಟ್ಟಿದ್ದೇವೆ. ಕೇಂದ್ರದಲ್ಲಿ ದೆಹಲಿಯಲ್ಲಿ ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಅದನ್ನೇ ಚರ್ಚೆ ಮಾಡಿದ್ದಾರೆ. ಹೈಕಮಾಂಡ್ ನಿಂದ ಯಾವ ನಿರ್ದೇಶನ ಬರುತ್ತದೆಯೋ ಬರುತ್ತೋ ಅದರಂತೆ ನಾವು ನಡೆದುಕೊಳ್ಳುತ್ತೇವೆ" ಎಂದು ಅವರು ಸ್ಪಷ್ಟಪಡಿಸಿದ್ದಾರೆ.

**ರಾಹುಲ್ ಗಾಂಧಿ ಭೇಟಿ ವಿಚಾರ**

ದೆಹಲಿಗೆ ಹೋದಾಗ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವುದು ತಮ್ಮ ಪದ್ಧತಿ ಎಂದು ಡಿಸಿಎಂ ಹೇಳಿದ್ದಾರೆ. "ನಾನು ರಾಜ್ಯದ ವಿಚಾರಗಳನ್ನು ಅವರೊಂದಿಗೆ ಚರ್ಚೆ ಮಾಡಿದ್ದೇನೆ. ಡೆಲ್ಲಿಗೆ ಹೋದಾಗ ಹೈಕಮಾಂಡ್ ಅನ್ನ ಭೇಟಿ ಮಾಡೋದು ಒಂದು ಪದ್ಧತಿ " ಎಂದರು.



ಸರ್ವ ಪಕ್ಷ ನಿಯೋಗಕ್ಕೆ ಪ್ರಧಾನಿಗಳು ಯಾವಾಗ ಸಮಯ ಕೊಡ್ತಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು "ಗೊತ್ತಿಲ್ಲ. ಅದನ್ನ ಮುಖ್ಯಮಂತ್ರಿಗಳು ತಿಳ್ಕೊಂಡು ಹೇಳ್ತೀವಿ ಅಂತ ಹೇಳಿದ್ದಾರೆ. ಮುಖ್ಯಮಂತ್ರಿಗಳಿಗೆ ಪ್ರಧಾನಮಂತ್ರಿಗಳ ಕಚೇರಿಯಿಂದ ಏನು ಮಾಹಿತಿ ಬರುತ್ತೋ ಅದರ ಮೇಲೆ ನಾವು ತೀರ್ಮಾನ ಮಾಡ್ತೀವಿ. ಬಿಜೆಪಿಯವರು ಹಿಂದೇಟು ಹಾಕ್ತಾ ಇದ್ದಾರೆ. ನಾವು ಕರೀತೀವಿ, ಅವರನ್ನ ಒಟ್ಟಿಗೆ ಕರ್ಕೊಂಡು ಹೋಗಬೇಕು ಅನ್ನೋದು ನಮ್ಮ ನಿರೀಕ್ಷೆ. ಅವರು ಬರೋದು ಬಿಡೋದು ಅವರಿಗೆ ಬಿಟ್ಟದ್ದು "ಎಂದರು. ದಿನಾಂಕ ನಿಗದಿಯಾದ ಕೂಡಲೇ ಸರ್ವಪಕ್ಷ ನಿಯೋಗವನ್ನು ಕೊಂಡೊಯ್ದು ರಾಜ್ಯದ ಸ್ಥಿತಿಗತಿಯನ್ನು ಪ್ರಧಾನಿಗಳಿಗೆ ಮನನ ಮಾಡಿಕೊಡಲಿದ್ದೇವೆ ಎಂದು ತಿಳಿಸಿದರು.

ಕೇಂದ್ರದಿಂದ ರಾಜ್ಯಕ್ಕೆ ಬರುತ್ತಿರುವ ಬರ ಅಧ್ಯಯನ ತಂಡಕ್ಕೆ ಕಳೆದ ಜೂನ್‌ನಿಂದ ಈವರೆಗೆ ರಾಜ್ಯದಲ್ಲಿ ಉಂಟಾಗಿರುವ ಮಳೆ ಕೊರತೆ ಹಾಗೂ ಬೆಳೆ ಹಾನಿಯ ಬಗ್ಗೆ ಮಾಹಿತಿಯನ್ನು ಒದಗಿಸಲಾಗುವುದು. ಕಳೆದ ಒಂದೆರೆಡು ದಿನಗಳಿಂದ ರಾಜ್ಯದ ಕೆಲವೆಡೆಗಳಲ್ಲಿ ಸುರಿಯುತ್ತಿದೆಯಾದರೂ ಇದರಿಂದ ರೈತರಿಗೆ ಹೆಚ್ಚಿನ ಪ್ರಯೋಜನವಿಲ್ಲ ಎಂಬುದನ್ನು ತಿಳಿಸಲಾಗುವುದು ಎಂದು ಮಾಹಿತಿ ನೀಡಿದರು.

ತುಮಕೂರು ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ಕೇಂದ್ರ ಸಚಿವರೂ ಆಗಿರುವ . ವಿ. ಸೋಮಣ್ಣ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ತುಮಕೂರಿನಿಂದ ರಾಯದುರ್ಗ ಮತ್ತು ದಾವಣಗೆರೆಗೆ ಮಾರ್ಗವಾಗಿ ಚಾಲ್ತಿಯಲ್ಲಿರುವ ರೈಲ್ವೇ ಕಾಮಗಾರಿ ಮತ್ತು ಕೆಲವೆಡೆಗಳಲ್ಲಿ ಉಂಟಾಗಿರುವ ಅಡಚಣೆಗಳ ಬಗ್ಗೆ ಚರ್ಚೆ ನಡೆಸಿದ್ದೇನೆ ಎಂದರು.

## ಡ್ರಗ್ಸ್ ಫೆಡ್ಲರ್ ಬಂಧನ ಎಂಡಿಎಂಎ ಜಪ್ತಿ

ಬೆಂಗಳೂರು, ಅ.1– ನಿಷೇಧಿತ ಮಾದಕ ವಸ್ತುಗಳಾದ ಎಂಡಿಎಂಎ ಹಾಗೂ ಗಾಂಜಾ ಮಾರಾಟ ಮಾಡುತ್ತಿದ್ದ ಡ್ರಗ್ಸ್ ಫೆಡ್ಲರ್ ನನ್ನು ಕೆಜಿಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಕಣ್ಣೂರು ಜಿಲ್ಲೆಯ ರಹೀಂ ಬಂಧಿತ ಆರೋಪಿಯಾಗಿದ್ದು,ಆತನಿಂದ 1.30 ಲಕ್ಷ ಮೌಲ್ಯದ 12 ಗ್ರಾಂ ಎಂಡಿ–ಎಂಎ ಹಾಗೂ 200 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ

ಕಳೆದ ಸೆ.27ರಂದು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕಾಚರಕನಹಳ್ಳಿ ಕೆ–ರೆಯ ಪಕ್ಕದ ರಾಮದೇವ ಗಾರ್ಡನ್ ಬಳಿ ವ್ಯಕ್ತಿಯೊಬ್ಬ ನಿಷೇಧಿತ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ದೊರೆತಿತ್ತು.ವಿಚಾರಣೆ ವೇಳೆ ಸುಲಭವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಅಪರಿಚಿತ ವ್ಯಕ್ತಿಯೊಬ್ಬರಿಂದ ಕಡಿಮೆ ಬೆಲೆಗೆ ಎಂಡಿಎಂಎ ಹಾಗೂ ಗಾಂಜಾವನ್ನು ಖರೀದಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದುದಾಗಿ ಆರೋಪಿಯು ತಿಳಿಸಿದ್ದಾನೆ. ಆತನ ಬಳಿಯಿದ್ದ 12 ಗ್ರಾಂ ಎಂಡಿಎಂಎ ಹಾಗೂ 200 ಗ್ರಾಂ ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ 1,30 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ 96ನೇ ಜನ್ಮ ದಿನಾಚರಣೆ ಹಾಗೂ ಚುನಾವಣೆ ಸುಧಾರಣೆಯಿಂದ ಸಮಾಜದ ಸುಧಾರಣೆ" ಕುರಿತಾದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿದ್ದರು. ಮಾಜಿ ಸಚಿವರಾದ ಪಿ.ಜಿ.ಆರ್. ಸಿಂಧ್ಯಾ, ಬಿ. ಸೋಮಶೇಖರ್, ಶಾಸಕ ಗಣೇಶ್ ಪ್ರಸಾದ್, ಸಮಾಜ ಸೇವಕರಾದ ತೇಜಸ್ವಿನಿ ಅನಂತಕುಮಾರ್, ರೈತ ಪರ ಹೋರಾಟಗಾರರಾದ ಚುಕ್ಕಿ ನಂಜುಂಡಸ್ವಾಮಿ, ಮಾಜಿ ಶಾಸಕರಾದ ಶಿವಶಂಕರ್, ನಂಜಯ್ಯನ ಮಠ, ಡಾ. ಎಂ.ಪಿ. ನಾಡಗೌಡ, ಪಟೇಲರ ಪುತ್ರರಾದ ಮಹಿಮಾ ಪಟೇಲ್, ತ್ರಿಶೂಲ್ ಪಟೇಲ್ ಉಪಸ್ಥಿತರಿದ್ದರು.



ಹೊಸಕೋಟೆ: ಚಿಕ್ಕಬಳ್ಳಾಪುರ ಲೋಕಸಭಾಕ್ಷೇತ್ರದ ಮಾಜಿ ಸಂಸದರು ಹಾಗೂ ಕರ್ನಾಟಕ ಸರ್ಕಾರದ ಮಾಜಿ ಸಚಿವರಾದಂತಹ ಬಿ ಎನ್ ಬಚ್ಚೇಗೌಡರ ಹುಟ್ಟುಹಬ್ಬದ ಅಂಗವಾಗಿ ಹೊಸಕೋಟೆಯೋಜನಾ ಪ್ರಾಧಿಕಾರದ ಮಾಜಿಅಧ್ಯಕ್ಷರಾದ ವಿ .ವಿಜಯಕುಮಾರ್‌ರವರು ಬಿ.ಎನ್. ಬಚ್ಚೇಗೌಡರಿಗೆ ಮಾಲಾರ್ಪಣೆ ಮಾಡಿ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು.. ಈ ಸಂದರ್ಭದಲ್ಲಿ ಸಂಸದರಾದ ಪಿ ಸಿ ಮೋಹನ್‌ರವರ ಪುತ್ರರಿತನ್. ಉದ್ಯಮಿಗಳಾದ ಬಿ.ವಿ ಬೈರೇಗೌಡರು. ವಿ.ವಿ ಸದಾನಂದ. ಸುಭಾ?ಗೌಡ ಹಾಗೂ ಬಿಎಂಆರ್ಡಿ ಸದಸ್ಯ ಸುಬ್ಬರಾಜು ಸೇರಿದಂತೆಇತರೆ ಸ್ನೇಹಿತರು ಹಾಜರಿದ್ದ ಶುಭಕೋರಿದರು.

# ನಕಲಿ ನೋಟು ಮುದ್ರಿಸಿ ಚಲಾವಣೆ 7 ಮಂದಿ ಬಂಧನ

# 21.68 ಲಕ್ಷ ಮೌಲ್ಯದ ಮಾಲು ಜಪ್ತಿ

ಬೆಂಗಳೂರು, ಅ.1– ಐದು ನೂರರ ಮುಖಬೆಲೆಯ ನೋಟುಗಳನ್ನು ಮುದ್ರಿಸಿ ಚಲಾವಣೆ ಮಾಡುತ್ತಿದ್ದ ಆರೋಪದಡಿ ಹೊರರಾಜ್ಯಗಳ ಏಳು ಮಂದಿಯನ್ನು ಚಾಮರಾಜಪೇಟೆ ಪೊಲೀಸರು ಬಂಧಿಸಿ 21.68 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿಯ ಗೋವಿಂದನ್(43) ಬರ್ಕತ್(48) ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಸತ್ಯಂ(47)ಲಕ್ಷ್ಮಣ(46)ಕೃಷ್ಣ(43)ಸೇರಿ ಬಂಧಿತ ಆರೋಪಿಗಳಿಂದ 21.68 ಲಕ್ಷ ಮೌಲ್ಯದ 500 ಮುಖಬೆಲೆಯ 4,337 ನಕಲಿ ನೋಟುಗಳು, ಕಾರು, ಎಂಟು ಮೊಬೈಲ್, ಹಾಗೂ ನಕಲಿ ನೋಟು ಮುದ್ರಿಸಲು ಬಳಸುತ್ತಿದ್ದ ವಿವಿಧ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಳೆದ ಸೆ.14ರಂದು ಮೈಸೂರು ರಸ್ತೆ ಫ್ಲೈಓವರ್ ಡೌನ್‌ರಾಂಪ್ ಸಮೀಪದ ಪೆಟ್ರೋಲ್ ಬಂಕ್ ಬಳಿ ಕಾರಿನಲ್ಲಿ ನಕಲಿ ನೋಟುಗಳನ್ನು ಚಲಾವಣೆ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ದೊರೆತಿತ್ತು. ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸುಲಭವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದಾರೆ. ಅವರಿಂದ 3,000 ನಕಲಿ 500 ನೋಟುಗಳು, ಕೃತ್ಯಕ್ಕೆ ಬಳಸಿದ್ದ ಕಾರು ಹಾಗೂ ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿಚಾರಣೆ ವೇಳೆ ಆರೋಪಿಗಳು ಇನ್ನೂ ಒಂಬತ್ತು ಮಂದಿ ಸಹಚರರೊಂದಿಗೆ ಸೇರಿಕೊಂಡು ನಕಲಿ ನೋಟುಗಳನ್ನು ಮುದ್ರಿಸಿ ಚಲಾವಣೆ ಮಾಡುತ್ತಿದ್ದ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ತನಿಖೆ ಮುಂದುವರಿಸಿದ ಪೊಲೀಸರು ಸೆ.16ರಂದು ತಮಿಳುನಾಡಿನ ಚೆನ್ನೈನಲ್ಲಿ ಇಬ್ಬರನ್ನು ಹಾಗೂ ಸೆ.18ರಂದು ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ಮೂವರನ್ನು ಬಂಧಿಸಿದ್ದಾರೆ. ಇವರಿಂದ ಒಟ್ಟು ಆರು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ತನಿಖೆಯ ಮುಂದುವರಿದ ಭಾಗವಾಗಿ ಸೆ.24 ಮತ್ತು 25ರಂದು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಆರೋಪಿಯೊಬ್ಬನ ಮನೆಯಲ್ಲಿ ಶೋಧ ನಡೆಸಿದ ಪೊಲೀಸರು ಮತ್ತಷ್ಟು 1,337 ನಕಲಿ 500 ನೋಟುಗಳನ್ನು ಪತ್ತೆಹಚ್ಚಿದ್ದಾರೆ. ನಕಲಿ ನೋಟು ಮುದ್ರಿಸಲು ಬಳಸುತ್ತಿದ್ದ ಕಂಪ್ಯೂಟರ್, ಲ್ಯಾಪ್‌ಟಾಪ್, ಲ್ಯಾಮಿನೇಟರ್, ಕಲರ್ ಪ್ರಿಂಟರ್, ಕಟಿಂಗ್ ಮಷಿನ್, ಹೊಲೊಗ್ರಾಂ, ಜೆರಾಕ್ಸ್ ಮಷಿನ್ ಸೇರಿದಂತೆ ವಿವಿಧ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣದಲ್ಲಿ ಬಂಧಿತ ಏಳು ಆರೋಪಿಗಳನ್ನು ಸೆ.17ರಿಂದ 26ರವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಶಂಕಿಸಲಾಗಿರುವ ಇನ್ನೂ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಪಶ್ಚಿಮ ವಿಭಾಗದ ಡಿಸಿಪಿ ಯತೀಶ್ ಎನ್., ಐಪಿಎಸ್ ಅವರ ಮಾರ್ಗದರ್ಶನದಲ್ಲಿ, ಚಿಕ್ಕಪೇಟೆ ಉಪವಿಭಾಗದ ಎಸಿಪಿ ದೀಪಕ್ ಸಿ.ವಿ. ನೇತೃತ್ವದಲ್ಲಿ ಚಾಮರಾಜಪೇಟೆ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಕಿರಣ್ ವಿ. ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಪ್ರಕರಣವನ್ನು ಭೇದಿಸಿದ್ದಾರೆ.